ದೆಹಲಿ ಕರ್ನಾಟಕ ಸಂಘದ

# ಅಭಿಮತ

ಡಿಸೆಂಬರ್ 2018
ಬೆಲೆ ರೂ. 1

## ಸಂಘದಲ್ಲಿ ಸಂಭ್ರಮದ ರಾಜ್ಯೋತ್ಸವ



## ವಿಶಿಷ್ಟ ಕನ್ನಡಿಗರು







ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 3
ಡಿಸೆಂಬರ್ 2018, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ನೇರ ಮಾತು

ಭಾರತವು ವಿವಿಧ ಸಂಸ್ಕೃತಿ ಮತ್ತು ಆಚಾರಗಳಿಂದ ವಿಭಿನ್ನವಾದ ದೇಶ. ಆದರೆ ದೇಶದ ನಾವೆಲ್ಲರೂ ಒಂದೇ ಎಂಬ ಭಾವನೆ ನಮಗೆ ದೇಶಾದ್ಯಂತ ಪಯಣಿಸುವಾಗ ತಿಳಿಯುತ್ತದೆ. ಅಂತಹ ಒಂದು ಸನ್ನಿವೇಶವು ಕರ್ನಾಟಕದಿಂದ ಉತ್ತರ ಭಾರತಕ್ಕೆ ಬಂದ ಯೋಗ ತಂಡದ ಅನುಭವವಾಗಿದೆ. ಕರ್ನಾಟಕದಿಂದ ಪಂಜಾಬ್ ರಾಜ್ಯದ ಪಟಿಯಾಲಕ್ಕೆ ಇತ್ತೀಚೆಗೆ ಐದು ದಿನಗಳ ಕಾಲ ನಲ್ವತ್ತೂ್ರನೆಯ ರಾಷ್ಟ್ರೀಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಭಾಗವಹಿಸಲು ಒಟ್ಟು ಐವತ್ತು ಜನ ಸ್ಪರ್ಧಾಳುಗಳು ಭಾಗವಹಿಸಿದ್ದರು. ಅವರು ಪಟಿಯಾಲವನ್ನು ತಲುಪಿದಾಗ ಅಲ್ಲಿನ ಸ್ಪರ್ಧೆಯ ಸಂಯೋಜಕರು ಅವರಿಗೆ ಉಳಿದುಕೊಳ್ಳಲು ಪಟಿಯಾಲದಲ್ಲಿರುವ ಗುರುನಾನಕ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಟೆಕ್ನಾಲಜಿಯಲ್ಲಿ ವ್ಯವಸ್ಥೆ ಮಾಡಿದ್ದರು. ಒಬ್ಬರು ಎಲ್ಲರಿಗೂ ಬೇಕಾಗುವಷ್ಟು ಕಾಫಿ ಹಾಗೂ ಬಿಸ್ಕಿಟ್‌ಗಳನ್ನು ಪ್ರತಿ ದಿನ ತಂದು ಕೊಡುತ್ತಿದ್ದರು. ಎಲ್ಲರನ್ನೂ ತುಂಬ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಸ್ಪರ್ಧಾಳುಗಳು ಅಲ್ಲಿಯ ವಾಚ್‌ಮೆನ್ ಆಗಿರಬೇಕೆಂದು ತಿಳಿದುಕೊಂಡಿದ್ದರಂತೆ. ಕೊನೆಗೆ ಅವರಲ್ಲಿ ವಿಚಾರಿಸಿದಾಗ ಅವರು ಗುರು ನಾನಕ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಟೆಕ್ನಾಲಜಿಯ ಡೈರೆಕ್ಟರ್ ಎಂದು ಗೊತ್ತಾಯಿತು. ಸ್ಪರ್ಧಾಳುಗಳು ಪಟಿಯಾಲಕ್ಕೆ ಒಂದು ದಿನ ಮುಂಚಿತವಾಗಿ ಹೋಗಿದ್ದರಿಂದ ಅಮೃತಸರ ನೋಡಲು ಹೋಗಬೇಕೆಂದು ಟ್ರಾವೆಲ್ ಏಜೆನ್ಸಿಯವರಿಗೆ ವಿಚಾರಿಸಿದಾಗ ಅವರು ಅಲ್ಲಿಗೆ ಹೋಗಿ ಬರಲು ಇಪ್ಪತ್ತೈದು ಸಾವಿರದಿಂದ ನಲ್ವತ್ತೆರಡು ಸಾವಿರ ರೂಪಾಯಿ ಕೇಳಿದರು. ಸ್ಪರ್ಧಾಳುಗಳಲ್ಲಿ ಅಷ್ಟೊಂದು ಇಲ್ಲದೇ ಇದ್ದುದರಿಂದ ಅಲ್ಲಿಯೇ ಗಸ್ತು ತಿರುಗುತ್ತಿದ್ದ ಎ.ಎಸ್.ಐ. ಬಳಿ ನಾವೆಲ್ಲ ಕರ್ನಾಟಕದಿಂದ ಯೋಗಾಸನ ಸ್ಪರ್ಧೆಗೆ ಬಂದಿದ್ದೇವೆ. ನಮಗೆ ಅಮೃತಸರ ನೋಡಿ ಬರಲು ಒಂದು ವಾಹನದ ವ್ಯವಸ್ಥೆ ಮಾಡಿ ಎಂದು ಕೇಳಿಕೊಂಡಾಗ ಅವರು ಇಪ್ಪತ್ತೇಳು ಸಾವಿರ ರೂಪಾಯಿಗೆ ವ್ಯವಸ್ಥೆ ಮಾಡಿ ಕೊಟ್ಟರು. ನಂತರ ಅವರೆಲ್ಲಾ ಅಮೃತಸರ ಹೋಗಿ ಬರುವವರೆಗೂ ಐದಾರು ಬಾರಿ ಫೋನ್ ಮಾಡಿ ಏನಾದರೂ ಕಷ್ಟ ಆಗಿದೆಯೇ ಎಂದು ವಿಚಾರಿಸಿಕೊಂಡರು. ಅವರು ಇರುವಷ್ಟು ದಿನ ಬಂದು ಅಲ್ಲಿ ವಿಚಾರಿಸಿಕೊಂಡು ಹೋಗಿ ಕೊನೆಯ ದಿನ ಎ.ಎಸ್.ಐ. ಅವರು ಹೆಂಡತಿ ಮಕ್ಕಳೊಂದಿಗೆ ಬಂದು ಎಲ್ಲಾ ಸ್ಪರ್ಧಾಳುಗಳನ್ನು ಬಸ್ ಸ್ಟ್ಯಾಂಡ್‌ವರೆಗೆ ತಲುಪಿಸಿಕೊಟ್ಟರು ಎಂದು ಈ ತಂಡದ ಸದಸ್ಯರು ತಮ್ಮ ಅನುಭವವನ್ನು ವಿವರಿಸಿದರು.

ಈ ತಂಡವು ದೆಹಲಿ ತಲುಪಿ ನಮ್ಮನ್ನು ಸಂಪರ್ಕಿಸಿದಾಗ ಅವರೆಲ್ಲಾ ನವದೆಹಲಿ ರೈಲ್ವೇ ನಿಲ್ದಾಣದಲ್ಲಿ ರಾತ್ರಿ ಕಳೆದು ಮರುದಿನ ಬೆಳಗ್ಗೆ ಬೆಂಗಳೂರು ಪ್ರಯಾಣಿಸುವುದಾಗಿ ತಿಳಿಯಿತು. ಹೆಚ್ಚಿನ ಸ್ಪರ್ಧಾಗಳುಗಳು ಹೆಣ್ಣು ಮಕ್ಕಳೇ ಆಗಿದ್ದುದರಿಂದ ಅವರನ್ನು ಸಂಘಕ್ಕೆ ಕರೆಸಿ ರಾತ್ರಿ ಊಟ ಕೊಡಿಸಿ, ರಾತ್ರಿ ಸಂಘದಲ್ಲಿ ಇದ್ದ ವ್ಯವಸ್ಥೆಯಲ್ಲಿ ವಸತಿ ವ್ಯವಸ್ಥೆ ಮಾಡಿಕೊಡಲಾಯಿತು. ಇಂತಹ ಅನುಭವಗಳನ್ನು ದೆಹಲಿ ಕರ್ನಾಟಕ ಸಂಘದ ಅನೇಕ ಸದಸ್ಯರು ಅನುಭವಿಸಿರಬಹುದು. ಸಂಘದ ಕಡೆಗೆ ಬರುವ ಎಲ್ಲಾ ಅತಿಥಿಗಳನ್ನು ಆದರದಿಂದ ಉಪಚರಿಸುವುದು ನಮ್ಮ ಕರ್ತವ್ಯವಾಗುತ್ತದೆ. ಕರ್ನಾಟಕದ ರಾಯಭಾರಿಯಂತೆ ರಾಷ್ಟ್ರ ರಾಜಧಾನಿಯಲ್ಲಿರುವ ನಮಗೆಲ್ಲರಿಗೂ ಇದೊಂದು ಒಳ್ಳೆಯ ಅನುಭವದ ಪಾಠವಾಗಿದೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.
ಫೋನ್ : 011–26109615 / 26104818

## ಮುನ್ನೋಟ

ಆತ್ಮೀಯ ದೆಹಲಿ ಕರ್ನಾಟಕ ಸಂಘದ ಸದಸ್ಯರುಗಳೇ ಈ ಕಾರ್ಯಕಾರಿ ಸಮಿತಿ ತನ್ನ ಅವಧಿಯಲ್ಲಿ ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಮಾಡಿದೆ ಎಂದು ತಿಳಿಯುತ್ತೇನೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನೀಡಿದ ಅನುದಾನದಿಂದ ಉತ್ತಮವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಜೊತೆಗೆ ಆರ್ಥಿಕವಾಗಿ ಸಂಘವನ್ನು ಬಲಿಷ್ಠಗೊಳಿಸುತ್ತ ಮೂರುಕೋಟಿ ರೂಪಾಯಿಗಳನ್ನು ಫಿಕ್ಸೆಡ್ ಡಿಪಾಸಿಟ್ ಮಾಡಿದ್ದೇವೆ. ಮುಖ್ಯವಾಗಿ ಇತಿಹಾಸದಲ್ಲಿ ಉಳಿಯುವ ಕೆಲವು ಕೆಲಸಗಳು ಆಗಿವೆ. ಅದರಲ್ಲಿ ಸಂಘದ ಪಕ್ಕದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ ಸರ್.ಎಂ. ವಿಶ್ವೇಶ್ವರಯ್ಯ ಹೆಸರು ನಾಮಕರಣ ಮತ್ತು ಜೆ.ಎನ್.ಯು.ವಿನಲ್ಲಿ ಕನ್ನಡ ಅಧ್ಯಯನ ಪೀಠ ಪ್ರಾರಂಭ. ಜೊತೆಗೆ ಮುಂಬರುವ ದಿನಗಳಲ್ಲಿ ನಮ್ಮ ಆಸೆಯಂತೆ ವಸತಿ  ಶಾಲೆಯನ್ನು ಮಾಡುವ ಎಲ್ಲಾ ಪ್ರಕ್ರಿಯೆಗಳು ನಡೆದಿವೆ, ಮತ್ತು ಎನ್.ಸಿ.ಆರ್. ನಲ್ಲಿರುವ ಎಲ್ಲಾ ಕನ್ನಡ ಸಂಘ ಸಂಸ್ಥೆಗಳ ಸಹಕಾರ ನೀಡುತ್ತಾ ಬಂದಿದ್ದೇವೆ. ತಮ್ಮೆಲ್ಲರ ಆಶೀರ್ವಾದದಿಂದ ಬರುವ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಹಯೋಗದೊಂದಿಗೆ ಸಂಘಕ್ಕೆ ಬೇರೊಂದು ಜಾಗವನ್ನು ತೆಗೆದುಕೊಳ್ಳುವ ಕೆಲಸಗಳು ನಡೆಯುತ್ತಿವೆ.

ಇದೇ ಡಿಸೆಂಬರ್ 16ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಡಾ. ಶಿವರಾಮ ಕಾರಂತ ಪ್ರಶಸ್ತಿ–ಶ್ರೀ ಸುಬ್ರಾಯ ಚೊಕ್ಕಾಡಿ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿ–ಡಾ. ಚಂದ್ರಶೇಖರ ಪಾಟೀಲ ಮತ್ತು ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ರಂಗ ಪ್ರಶಸ್ತಿ–ಶ್ರೀ ಸುರೇಶ್ ಆನಗಳ್ಳಿ ಅವರಿಗೆ ಪ್ರದಾನ ಮಾಡಲಿದ್ದೇವೆ. 30ರಂದು ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ಜನವರಿ 13ರಂದು ಸಂಘದ ಹೊಸ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆಯಲಿದೆ. ತಾವೆಲ್ಲರೂ ಬಂದು ಭಾಗವಹಿಸಿ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**2018 ಡಿಸೆಂಬರ್ 16**
ಭಾನುವಾರ
ಬೆಳಿಗ್ಗೆ : 10 ಗಂಟೆಗೆ

ವಿಚಾರ ಸಂಕಿರಣ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭ
ಡಾ. ಶಿವರಾಮ ಕಾರಂತ ಪ್ರಶಸ್ತಿ–ಶ್ರೀ ಸುಬ್ರಾಯ ಚೊಕ್ಕಾಡಿ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿ–ಡಾ. ಚಂದ್ರಶೇಖರ ಪಾಟೀಲ ಮತ್ತು ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ರಂಗ ಪ್ರಶಸ್ತಿ–ಶ್ರೀ ಸುರೇಶ್ ಆನಗಳ್ಳಿ ಅವರಿಗೆ.

ಟಿ.ಎಸ್. ನಾಗಾಭರಣ ನಿರ್ದೇಶನದ ಶಿವರಾಜ್‌ಕುಮಾರ್ ಮತ್ತು ರೇಖಾ ಅಭಿನಯದ ಚಿಗುರಿದ ಕನಸು ಚಲನಚಿತ್ರ ಪ್ರದರ್ಶನ

**2018 ಡಿಸೆಂಬರ್ 30**
ಭಾನುವಾರ
ಪೂರ್ವಾಹ್ನ 11 ಗಂಟೆಗೆ

ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ

**2018 ಡಿಸೆಂಬರ್ 30**
ಭಾನುವಾರ
ಸಂಜೆ 5 ಗಂಟೆಗೆ

ದೃಶ್ಯ ಬೆಂಗಳೂರು ಪ್ರಸ್ತುತಪಡಿಸುವ ನಾಟಕ
ಅಭಿಯಾನ
ವಿನ್ಯಾಸ ಮತ್ತು ನಿರ್ದೇಶನ–ದಾಕ್ಷಾಯಿಣಿ ಭಟ್
ರಚನೆ : ಜಯಪ್ರಕಾಶ್ ಮಾವಿನಕುಳಿ

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಡಿಸೆಂಬರ್, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಡಿಸೆಂಬರ್, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 30 ಡಿಸೆಂಬರ್, 2018ರಂದು ಬೆಳಿಗ್ಗೆ 11 ಗಂಟೆಯಿಂದ

## ದೆಹಲಿ ಕರ್ನಾಟಕ ಸಂಘದ- ಪ್ರಕಟಣೆಗಳು

- ದೆಹಲಿ ಕನ್ನಡ ಸಂಪುಟ
- ಸಿಡಿಲಿನ ಬಡಿತ ಹಾಗೂ ಏನಿದೆ ಈ ಮುದುಕನ ಗುಟ್ಟು?
- ರಾಜಧಾನಿಯಲ್ಲ ಕರ್ನಾಟಕ
- ಜರ್ನಿ ಟು ವಾರ್ಧಾ–ಇಂಗ್ಲಿಷ್
- ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ–ನಾಟಕ
- ದೇವರು ಎದ್ದು ಬಂದಾಗ–ನಾಟಕ
- ನಾನು–ನೀನು ಕವನ ಸಂಕಲನ
- ರಂಗಿನೋಕುಳಿ–ಕವನ ಸಂಕಲನ
- ನಮ್ಮಿಬ್ಬರ ನಡುವೆ–ಕವಿತೆಗಳು
- ಅಕವಿತೆ–ಕವನ ಸಂಕಲನ
- ನಿರಂಜನ ಕೃತಿ–ಸ್ಮೃತಿ ನಿರಂಜನ ನೀಲಾಂಜನ

**ಅಭಿಮತ ಪ್ರಧಾನ ಸಂಪಾದಕರು**
ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 29 ಸಂಚಿಕೆ 3
ಡಿಸೆಂಬರ್ 2018

ಅಭಿಮತ
ದೇನಾ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಸಂವಿಧಾನದ ಮೇಲಿನ ಗೌರವದಿಂದ ಪ್ರಜಾತಂತ್ರದ ಉಳಿವು.

ಒಂದು ರಾಷ್ಟ್ರದ ನೀತಿ ನಿಯಮಗಳು ಅದರ ಸಂವಿಧಾನದಲ್ಲಿರುತ್ತವೆ. 1947ರಲ್ಲಿ ಸ್ವಾತಂತ್ರ್ಯ ಪಡೆದ ಭಾರತವು 1949ರ ನವೆಂಬರ್‌ನಲ್ಲಿ ಸಂವಿಧಾನವನ್ನು ಅಂಗೀಕರಿಸಿಕೊಂಡಿದೆ. ಅದು 1950 ಜನವರಿ 26ರಂದು ಅನುಷ್ಠಾನಕ್ಕೆ ಬಂತು. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ವೀಕರಿಸಿದ ಭಾರತವು ತನ್ನ ಅಗಾಧ ಜ್ಞಾನ ಪರಂಪರೆಯಿಂದ ಅಪೂರ್ವವಾದುದನ್ನು ಪಡೆದು ಕೊಂಡಂತೆ ಆಧುನಿಕ ಚಿಂತನೆಗಳನ್ನು ತನ್ನ ಸಂವಿಧಾನದಲ್ಲಿ ಅಳವಡಿಸಿದೆ. ಸಂವಿಧಾನವು ಪ್ರತಿಯೊಬ್ಬ ಪ್ರಜೆಗೆ ಸಮಾನತೆ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವನ್ನು ನೀಡಿದೆ. ತನ್ನ ಪ್ರಸ್ತಾವನೆಯಲ್ಲಿ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಸರ್ವ ಭಾವ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಿ ಎಲ್ಲರಿಗೂ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ಮತ್ತು ಸಮಾನ ಅವಕಾಶ ದೊರೆಯುವಂತೆ ಮಾಡಿದೆ. ರಾಷ್ಟ್ರದ ಮೂಲಭೂತ ಮೌಲ್ಯಗಳನ್ನು, ತತ್ವಗಳನ್ನು ಮತ್ತು ಭಾರತದ ಧ್ಯೇಯೋದ್ದೇಶಗಳನ್ನು ಸ್ಪಷ್ಟವಾಗಿ ಪ್ರಸ್ತಾವನೆಯಲ್ಲಿ ಅಂತರ್ಗತಗೊಳಿಸಲಾಗಿದೆ.

ತನ್ನ ಎಲ್ಲಾ ಜನಸಮುದಾಯದಿಂದ ಪಡೆದ ಅಧಿಕಾರವನ್ನು ಭಾರತದ ರಾಜಕಾರಣದ ಸಾರ್ವಭೌಮತ್ವವು ಪಡೆಯುತ್ತದೆ. ಇದು ಪ್ರಜಾತಾಂತ್ರಿಕವಾಗಿ ಜನರು, ಜನರಿಂದ, ಜನರಿಗಾಗಿ ರೂಪಿಸುವ ಸರಕಾರ. ವ್ಯಕ್ತಿ ಸ್ವಾತಂತ್ರ್ಯ, ಉಪಾಸನೆ ಸ್ವಾತಂತ್ರ್ಯ, ಸರ್ವಧರ್ಮ ಸಹಿಷ್ಣುತೆಗಳು ಸಂವಿಧಾನದ ಮೂಲ ಆಶಯಗಳಾಗಿವೆ. ವ್ಯಕ್ತಿಯ ಸ್ವಾತಂತ್ರ್ಯದ ಮೇಲೆ ಯಾವುದೇ ಕಡಿವಾಣವನ್ನು ಹಾಕಲು ಭಾರತದ ಗಣತಂತ್ರದಲ್ಲಿ ಸಾಧ್ಯವಿಲ್ಲ. ಹಲವು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಭಾಷೀಯ ಜನರಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಸಂಖ್ಯಾತರ ನಿರ್ಣಯಗಳು ನಿರ್ಧಾರಗಳಾದರೆ ಅಲ್ಪಸಂಖ್ಯಾತರ ದನಿಯನ್ನು ಹತ್ತಿಕ್ಕುವ ಕೆಲಸಗಳು ನಡೆಯುತ್ತವೆ. ಆದರೆ ಭಾರತದ ಸಂವಿಧಾನವು ಅಲ್ಪಸಂಖ್ಯಾತರ ಶೋಷಣೆಯನ್ನು ಮಾಡಲಾಗದಂತಹ ನೀತಿಗಳನ್ನು ತನ್ನೊಳಗೆ ಅಳವಡಿಸಿಕೊಂಡಿದೆ. ಹತ್ತು ಹಲವು ದೇಶಗಳಾಗಿದ್ದ ಭಾರತವು ಸ್ವಾತಂತ್ರ್ಯ ನಂತರ ಒಂದಾಗಿ ಒಂದೇ ಕಾನೂನಿನ ಅಡಿಯಲ್ಲಿ ಬಂತು.

ಭಾರತದ ಸಂವಿಧಾನದ ಅನುಷ್ಠಾನದ ನಂತರ ಭಾರತೀಯರೆಲ್ಲರೂ ಒಂದೇ ಎಂಬ ಒಗ್ಗಟ್ಟಿನ ಭಾವನೆ ಬಂದಂತೆ, ಹಿಂದೆ ಇರದ ಸಮಾನತೆಯ ವಿಚಾರವೂ ಬಂತು. ಭಾರತದ ಸಂವಿಧಾನದ ರಚನೆಗಿಂತ ಮೊದಲು ವಿಶ್ವದ ಹಲವಾರು ದೇಶಗಳು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಸ್ವೀಕರಿಸಿ ತಮ್ಮದೇ ಸಂವಿಧಾನಗಳನ್ನು ಅನುಸರಿಸುತ್ತಿದ್ದವು. ಈ ಎಲ್ಲಾ ರಾಷ್ಟ್ರಗಳ ಒಳಿತು ಕೆಡುಕುಗಳನ್ನು ಅಧ್ಯಯನ ಮಾಡಿದ ನಮ್ಮ ಸಂವಿಧಾನದ ರಚನೆಕಾರರು ಒಂದು ಲೋಪವಿಲ್ಲದ ಸಂವಿಧಾನವನ್ನು ಭಾರತೀಯರಿಗೆ ನೀಡಲು ಶ್ರಮಿಸಿದರು. ನಮ್ಮ ಸಂವಿಧಾನವು ಹಲವು ಸಂದರ್ಭಗಳಲ್ಲಿ ಜಟಿಲವಾಗಿ ಕಂಡುಬಂದರೆ ಮತ್ತೆ ಹಲವು ವಿಚಾರಗಳಲ್ಲಿ ಹೊಂದಾಣಿಕೆಯ ಪರಿಕಲ್ಪನೆಯನ್ನು ಹೊಂದಿದ್ದು ಎಲ್ಲ ಸವಾಲುಗಳನ್ನು ಎದುರಿಸಲು ಶಕ್ತವಾಗಿದೆ. ಸಾರ್ವತ್ರಿಕ ಮತದಾನದ ಮೂಲವನ್ನು ಅನುಸರಿಸಿ ಪ್ರತಿ ಪ್ರಜೆಯೂ ಸಮಾನನಾದವನು ಎಂದು ದೃಢಪಡಿಸಿದೆ. ಸಮಾಜದ ಅತ್ಯಂತ ಉನ್ನತ ಸ್ಥಾನದಲ್ಲಿರುವ ವ್ಯಕ್ತಿ ಹಾಗೂ ಕಟ್ಟಕಡೆಯ ವ್ಯಕ್ತಿ ಚಲಾಯಿಸುವ ಮತದಾನದ ಬೆಲೆ ಒಂದೇ ಆಗಿದೆ. ಜತೆಗೆ ಒಕ್ಕೂಟ ವ್ಯವಸ್ಥೆಯನ್ನು ಅನುಸರಿಸಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಾಗೂ ಸ್ಥಳೀಯ ಆಡಳಿತದಿಂದಾಗಿ ಎಲ್ಲಾ ಜನರಿಗೆ ದೇಶವನ್ನು ನಡೆಸಲು ಅವಕಾಶವನ್ನು ನೀಡಲಾಗಿದೆ. ಇಷ್ಟೆಲ್ಲಾ ಇದ್ದರೂ ಕೆಲವೊಂದು ಸನ್ನಿವೇಶಗಳು ಮತ್ತು ಸಂದರ್ಭಗಳು ನಮ್ಮ ಸಂವಿಧಾನದ ಮೂಲ ಆಶಯಗಳನ್ನು ನಮ್ಮ ಪ್ರಭುತ್ವವು ಹಿನ್ನೆಲೆಗೆ ಸರಿಸುವ ಕುರಿತು ಸಂವಿಧಾನದ ಮೇಲೆ ನಂಬಿಕೆ ಇಟ್ಟವರು ಭಯವನ್ನು ವ್ಯಕ್ತ ಪಡಿಸುತ್ತಿದ್ದಾರೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವು ಬಿಕ್ಕಟ್ಟುಗಳ ಕುರಿತು ಜನಸಾಮಾನ್ಯರನ್ನು ಎಚ್ಚರಿಸುತ್ತಾ ಬಂದಿದೆ.

ಭದ್ರ ಬುನಾದಿಯಿಂದ ರಚಿಸಲಾದ ನಮ್ಮ ಸಂವಿಧಾನಕ್ಕೆ ಬಲವಾದ ಕೊಡಲಿಯೇಟು ಬೀಳುವ ಸಾಧ್ಯತೆ ಬಹಳ ಕಡಿಮೆಯಾದರೂ ಸಂವಿಧಾನದ ಬುಡವನ್ನು ಅಲ್ಲಾಡಿಸುವಾಗ ನಾವೆಲ್ಲಾ ಎಚ್ಚರದಿಂದಿರುವುದು ಅವಶ್ಯಕವಾಗಿದೆ. ನಮ್ಮ ಶಾಸನ ಸಭೆಗಳು ರಚಿಸಿದ ಕಾನೂನುಗಳನ್ನು ಪಾಲಿಸುವುದು ಪ್ರಜೆಗಳ ಕರ್ತವ್ಯ. ಅದೇ ರೀತಿ ನ್ಯಾಯಾಂಗಗಳು ನಿರ್ಧರಿಸುವ ನಿರ್ಣಯಗಳು ಕೂಡ ಸಾಂವಿಧಾನಿಕವಾಗಿ ಇರುತ್ತವೆ ಎಂಬ ನಂಬುಗೆಯನ್ನು ಹೊಂದಿರಬೇಕು. ಇವುಗಳಲ್ಲಿ ಚ್ಯುತಿಗಳು ಕಂಡು ಬಂದಾಗ ಸಾಮಾನ್ಯ ಪ್ರಜೆಗಳಾಗಿ ನಮಗೆ ಸಾಂವಿಧಾನಿಕ ರೀತಿಯಲ್ಲಿ ಪ್ರತಿಭಟಿಸುವ, ಪ್ರಶ್ನಿಸುವ ಮತ್ತು ಬದಲಾವಣೆಗಳನ್ನು ದೊರಕಿಸಿಕೊಳ್ಳುವ ಹಲವು ದಾರಿಗಳು ಸಂವಿಧಾನದ ಚೌಕಟ್ಟಿನಲ್ಲಿವೆ. ಹಾಗಾಗಿ ನಾವೆಲ್ಲಾ ಸಂವಿಧಾನವನ್ನು ಗೌರವಿಸುತ್ತಾ ನಮ್ಮ ಪ್ರಜಾತಾಂತ್ರಿಕತೆಯನ್ನು ಬಲಪಡಿಸಬೇಕು.

ಬಾಲಕೃಷ್ಣ ನಾಯ್ಕ್ ಡಿ.

# ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿಗಳ ಘೋಷಣೆ



## ಚಂಪಾರಿಗೆ

### ಡಾ. ಸರೋಜಿನಿ ಮಹಿಷಿ ಪ್ರಶಸ್ತಿ



## ಸುಬ್ರಾಯ ಚೊಕ್ಕಾಡಿಗೆ

### ಡಾ. ಶಿವರಾಮ ಕಾರಂತ ಪ್ರಶಸ್ತಿ



## ಸುರೇಶ್ ಆನಗಳ್ಳಿಗೆ


### ಕನ್ನಡ ಭಾರತಿ ರಂಗ ಪ್ರಶಸ್ತಿ

ದೆಹಲಿ ಕರ್ನಾಟಕ ಸಂಘದ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಗೆ ಹಿರಿಯ ಸಾಹಿತಿ ಚಂದ್ರಶೇಖರ್ ಪಾಟೀಲ್ ಮತ್ತು ಡಾ. ಶಿವರಾಮ ಕಾರಂತ ಪ್ರಶಸ್ತಿಗೆ ಹಿರಿಯ ಕವಿ ಸುಬ್ರಾಯ ಚೊಕ್ಕಾಡಿ ಅವರನ್ನು ಆಯ್ಕೆ ಮಾಡಲಾಗಿದೆ. ಸಾಹಿತಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್. ಜಿ. ಸಿದ್ದರಾಮಯ್ಯ ಹಾಗೂ ಹಿರಿಯ ಸಾಹಿತಿ ಮತ್ತು ರಾಜ್ಯಸಭಾ ಸದಸ್ಯರಾದ ಡಾ. ಎಲ್ ಹನುಮಂತಯ್ಯ ಅವರನ್ನೊಳಗೊಂಡ ಆಯ್ಕೆ ಸಮಿತಿ ಇವರನ್ನು ಆಯ್ಕೆ ಮಾಡಿದೆ.

ದೆಹಲಿ ಕರ್ನಾಟಕ ಸಂಘದ 'ಕನ್ನಡ ಭಾರತಿ ರಂಗ ಪ್ರಶಸ್ತಿ'ಗೆ ಹಿರಿಯ ರಂಗಕರ್ಮಿ ಸುರೇಶ್ ಆನಗಳ್ಳಿ ಅವರನ್ನು ಆರಿಸಲಾಗಿದೆ. ಹಿರಿಯ ಸಾಹಿತಿ ಹೆಚ್. ಎಸ್. ಶಿವಪ್ರಕಾಶ್ ಮತ್ತು ರಂಗಕರ್ಮಿ ಶ್ರೀ ಸುರೇಶ್ ಶೆಟ್ಟಿ ಅವರನ್ನು ಒಳಗೊಂಡಿದ್ದ ಆಯ್ಕೆ ಸಮಿತಿಯು ಸುರೇಶ್ ಆನಗಳ್ಳಿ ಅವರ ಹೆಸರನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡಿತ್ತು.

ಈ ಮೂರು ಪ್ರಶಸ್ತಿಗಳು ತಲಾ ರೂ. 50,000 ನಗದು, ಸ್ಮರಣಿಕೆ ಮತ್ತು ದೆಹಲಿಗೆ ವಿಮಾನಯಾನ ವೆಚ್ಚವನ್ನು ಒಳಗೊಂಡಿರುತ್ತದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಡಿಸೆಂಬರ್ 16 ರಂದು ಆಯೋಜಿಸಲಾಗಿದೆ.


## ಈ ಹಿಂದೆ ನೀಡಿದ ಪ್ರಶಸ್ತಿಗಳ ವಿವರ



**ಡಾ. ಶಿವರಾಮ ಕಾರಂತ ಪ್ರಶಸ್ತಿ :** ಈ ಪ್ರತಿಷ್ಠಿತ ಪ್ರಶಸ್ತಿಯನ್ನು 1998ರಲ್ಲಿ ಆರಂಭ ಮಾಡಿದ್ದು ಮೊದಲ ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಮಹತ್ತರ ಸಾಧನೆಗಾಗಿ ಡಾ. ಯಶವಂತ ಚಿತ್ತಾಲ ಅವರಿಗೆ ಹಾಗೂ ದ್ವಿತೀಯ ಪ್ರಶಸ್ತಿಯನ್ನು ವಿಜ್ಞಾನ ಮತ್ತು ಪರಿಸರ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿದ ಶ್ರೀ ಜಿ.ಟಿ. ನಾರಾಯಣ ರಾವ್, 2010ರ ಪ್ರಶಸ್ತಿಯನ್ನು ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಶ್ರೀ ಬನ್ನಂಜೆ ಸಂಜೀವ ಸುವರ್ಣ ಹಾಗೂ 2012ರ ಪ್ರಶಸ್ತಿಯನ್ನು ಪರಿಸರ ಕ್ಷೇತ್ರದಲ್ಲಿ ಸಾಧನೆಗೈದ ಶ್ರೀಮತಿ ಸಾಲುಮರದ ತಿಮ್ಮಕ್ಕ, 2014ರ ಪ್ರಶಸ್ತಿಯನ್ನು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ದುಡಿದ ಶ್ರೀ ಕೋಟಿಗಾನಹಳ್ಳಿ ರಾಮಯ್ಯನವರಿಗೆ ಹಾಗೂ ಪ್ರಕಾಶನ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ 2017ರ ಪ್ರಶಸ್ತಿಯನ್ನು ಧಾರವಾಡದ ಮಹೋಹರ ಗ್ರಂಥಮಾಲಾಕ್ಕೆ ನೀಡಲಾಗಿದೆ.



**ಡಾ. ಸರೋಜಿನಿ ಮಹಿಷಿ ಪ್ರಶಸ್ತಿ :** ದೆಹಲಿ ಕರ್ನಾಟಕ ಸಂಘ ಮಾಜಿ ಅಧ್ಯಕ್ಷೆ ಡಾ. ಸರೋಜಿನಿ ಮಹಿಷಿಯವರ ಹೆಸರಿನಲ್ಲಿ ಪ್ರತಿ ವರ್ಷ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡುತ್ತಿದೆ. 2016ರಲ್ಲಿ ಪ್ರಾರಂಭವಾದ ಇದರ ಮೊದಲ ಪ್ರಶಸ್ತಿಗೆ ಡಾ. ಎಚ್.ಎಸ್. ಅನುಪಮಾ ಅವರು ಭಾಜನರಾಗಿದ್ದಾರೆ.



**ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ರಂಗ ಪ್ರಶಸ್ತಿ:** ರಂಗಭೂಮಿ ಕ್ಷೇತ್ರದಲ್ಲಿ ಮಹತ್ತರವಾದ ಸೇವೆಯನ್ನು ಸಲ್ಲಿಸಿದವರನ್ನು ಗುರುತಿಸಿ ಪ್ರತೀ ವರ್ಷ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. 2015ರಲ್ಲಿ ಮೊದಲ ಪ್ರಶಸ್ತಿಯನ್ನು 'ಕನ್ನಡ ಭಾರತಿ'ಯ ಸಂಸ್ಥಾಪಕ ಸದಸ್ಯರಲ್ಲೊಬ್ಬರಾದ ರಂಗಕರ್ಮಿ ಎಂ.ವಿ. ನಾರಾಯಣರಾವ್ ಅವರಿಗೆ, 2016ರಲ್ಲಿ ಪ್ರಶಸ್ತಿಯನ್ನು ರಂಗಕಲಾವಿದೆ ಸರೋಜಿನಿ ಶೆಟ್ಟಿಯವರಿಗೆ ನೀಡಲಾಗಿದೆ. ಅ

*ಅಭಿಮತ ವರದಿ*

# ದೆಹಲಿ ಕರ್ನಾಟಕ ಸಂಘದಲ್ಲಿ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ

## ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ

ದೆಹಲಿ ಕರ್ನಾಟಕ ಸಂಘವು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಈ ವರ್ಷದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿ ವೇತನ, ವಾರ್ಷಿಕ ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆ ಹಾಗೂ ಸಂಘದ ಸದಸ್ಯರಿಂದ ಕೃಷಿ ಆಧಾರಿತ ನೃತ್ಯ ಸಂಭ್ರಮ ಕಾರ್ಯಕ್ರಮವನ್ನು ಇದೇ ನವೆಂಬರ್ 25ರಂದು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮವನ್ನು ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿರುವ ಶ್ರೀ ಗಿರೀಶ್ ಹೊಸೂರು ಅವರು ಉದ್ಘಾಟಿಸಿದರು. ನವದೆಹಲಿಯ ದೂರದರ್ಶನ ಕಿಸಾನ್ ಚಾನಲ್ ಉಪಮಹಾನಿರ್ದೇಶಕರಾದ ಶ್ರೀ ಎನ್. ಚಂದ್ರಶೇಖರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಗಿರೀಶ್ ಹೊಸೂರು ಅವರು ಹೊರನಾಡ ಕನ್ನಡಿಗರಾದ ನಾವು ಕರ್ನಾಟಕದಲ್ಲಿ ಸಿಗುವ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದೇವೆ. ಸಿ.ಇ.ಟಿ. ಪರೀಕ್ಷೆ ಬರೆಯಲು ಹೊರನಾಡ ಕನ್ನಡಿಗರಿಗೆ ಎದುರಾಗುವ ಸಮಸ್ಯೆಯನ್ನು ಉದಾಹರಿಸಿದರು. ಆ ಸೌಲಭ್ಯಗಳನ್ನು ಪಡೆಯಲು ದೆಹಲಿ ಕರ್ನಾಟಕ ಸಂಘವು ಒಂದು ವೇದಿಕೆಯಾಗಿ ಕರ್ನಾಟಕ ಸರ್ಕಾರದ ಜೊತೆಗೆ ಕೆಲಸ ಮಾಡಬೇಕು ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ದೆಹಲಿ ಕರ್ನಾಟಕ ಸಂಘವು ಪ್ರತಿ ವಾರಕ್ಕೊಂದು ಕಾರ್ಯಕ್ರಮ, ವಿದ್ಯಾರ್ಥಿ ವೇತನ ವಿತರಣೆ ಮತ್ತು ವಿವಿಧ ಆಟೋಟ ಸ್ಪರ್ಧೆಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು. ಸಂಘವು ಕರ್ನಾಟಕದ ಜೊತೆ ಸೇತುವೆಯಾಗಿ ಕೆಲಸ ಮಾಡುತ್ತಾ ಇದೆ. ಇದಕ್ಕೆ ಶ್ರಮಿಸಿದ ಎಲ್ಲಾ ಹಿರಿಯರಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಮಾನವ ಸಂಪನ್ಮೂಲ ಸಚಿವಾಲಯದಲ್ಲಿ ಕನ್ನಡಿಗರಿಗೆ ಏನಾದರೂ ಸಹಾಯ ಬೇಕಾದರೆ ಮಾಡಲು ಸದಾ ಸಿದ್ದ ಎಂದರು.

ದೆಹಲಿ ಕರ್ನಾಟಕ ಸಂಘವು ಸುಮಾರು 70 ವರ್ಷಗಳ ಹಿಂದೆ ಸ್ಥಾಪನೆಗೊಂಡಂದಿನಿಂದ ವರ್ಷವಿಡೀ ನಮ್ಮ ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದೆ. ಇದರ ಬಗ್ಗೆ ದೆಹಲಿಯಲ್ಲಿ ತುಂಬಾ ಒಳ್ಳೆಯ ಪ್ರಚಾರವೂ ಇದೆ. ನಾನೂ ಕೂಡ ಕಳೆದ 20–22 ವರ್ಷದಿಂದ ಚಟುವಟಿಕೆಗಳನ್ನು ನೋಡುತ್ತಾ ಇದ್ದೇನೆ. ದೆಹಲಿಯಲ್ಲಿ ಕರ್ನಾಟಕ ಸಂಘ ಸಂಸ್ಕೃತಿಯ ಬಗ್ಗೆ ಅಷ್ಟೇ ಅಲ್ಲ ಸ್ವಾದಿಷ್ಟ ಭೋಜನದ ಬಗ್ಗೆಯೂ ಪರಿಚಯ ಮಾಡಿ ಕೊಟ್ಟಿದೆ ಎಂದು ಶ್ರೀ ಗಿರೀಶ್ ಹೊಸೂರು ಅವರು ವಿವರಿಸಿದರು. ವಿಶಿಷ್ಟ ಕನ್ನಡಿಗ ಪ್ರಶಸ್ತಿ ಸ್ವೀಕರಿಸುತ್ತಿರುವ ಶ್ರೀ ಎನ್.ಎ. ಮಾಧವ, ಶ್ರೀಮತಿ ಶಾಲನ್ ಮುರಗೋಡ ಮತ್ತು ಶ್ರೀ ಕೆ.ಟಿ. ಗಣೇಶ್ ಹಾಗೂ ಅಭಿನಂದನೆ ಸ್ವೀಕರಿಸುತ್ತಿರುವ ಶ್ರೀ ಸುಧೀರ್ ಫಡ್ನೀಸ್, ಶ್ರೀ ಪಿ.ಡಿ. ವಲ್ಸನ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀ ಚಂದ್ರಶೇಖರ್ ಅವರು ಮಾತನಾಡುತ್ತ ದೆಹಲಿ ಕರ್ನಾಟಕ ಸಂಘವು ಕರ್ನಾಟಕದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಕರ್ನಾಟಕದ ಕಲೆ, ಸಂಸ್ಕೃತಿಯನ್ನು ಪಸರಿಸುವಂತಹ ಉತ್ತಮ ಕೆಲಸವನ್ನು ಮಾಡುತ್ತಿದೆ ಎಂದು ಕೊಂಡಾಡಿದರು. ನಾನು ದೂರದರ್ಶನದಲ್ಲಿ ಕೆಲಸ ಮಾಡಲು 1984ರಲ್ಲಿ ಛಾಯಾಗ್ರಾಹಕನಾಗಿ ಬಂದಾಗ ನಮ್ಮನ್ನು 'ಮದ್ರಾಸಿ' ಎಂದು ಕರೆಯುತ್ತಿದ್ದರು. ಆದರೆ ಈಗ ನೋಡಿದ್ರೆ 'ಕನ್ನಡಿಗ' ಅಂದ್ರೆ ನೀವು ಕರ್ನಾಟಕದವರು ಎಂದು ಬಿಂಬಿಸುತ್ತಾರೆ ಎಂದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ, ಜೆ.ಎನ್.ಯು.ವಿನ ಕನ್ನಡ ಅಧ್ಯಯನ ಪೀಠದಲ್ಲಿ ಡಾ. ಪುರುಷೋತ್ತಮ ಬಿಳಿಮಲೆಯವರು ಮೂರು ವರ್ಷದ ಕೆಲಸಾವಧಿ ಮುಗಿದು ಮತ್ತೆ ಎರಡು ವರ್ಷಗಳಿಗೆ ವಿಸ್ತರಣೆಗೊಂಡಿದೆ ಎಂದು ಹೇಳುತ್ತಾ, ಜೆ.ಎನ್.ಯು. ಕನ್ನಡ ಅಧ್ಯಯನ ಪೀಠಕ್ಕೆ ಯು.ಜಿ.ಸಿ.ಯಿಂದ ಖಾಯಂ ಪ್ರಾಧ್ಯಾಪಕರ ನೇಮಕ, ದೆಹಲಿ ವಿಶ್ವವಿದ್ಯಾಲಯದಲ್ಲಿ ತೆರವಾಗಿರುವ ಕನ್ನಡ ಅಧ್ಯಾಪಕರ ನೇಮಕ ಮತ್ತು ವಾರಾಣಾಸಿಯಲ್ಲಿ ಮುಚ್ಚಿಹೋಗಿರುವ ಕನ್ನಡ ಅಧ್ಯಯನ ಪೀಠದ ತೆರವು ಗೊಳಿಸುವಂತಹ ಕೆಲಸವನ್ನು ಮಾಡುವಂತೆ ಮಾನವ ಸಂಪನ್ಮೂಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಶ್ರೀ ಗಿರೀಶ್ ಹೊಸೂರು ಅವರಲ್ಲಿ ವಿನಂತಿಸಿಕೊಂಡರು.

ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಶ್ರೀ ಎನ್.ಎ. ಮಾಧವ ಅವರು ನಮ್ಮನ್ನು ವಿಶಿಷ್ಟ ಕನ್ನಡಿಗರೆಂದು ಪರಿಗಣಿಸಿದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸಿದರು. ನಾನು ದೆಹಲಿಗೆ ಬಂದು ಸಮಾರು 40 ವರ್ಷಗಳಾದವು. ಆಗಿನಿಂದಲೇ ದೆಹಲಿಯಲ್ಲಿನ ಬೆಳವಣಿಗೆಯನ್ನು ನೋಡುತ್ತಾ ಇದ್ದೇನೆ. ದೆಹಲಿ ಕರ್ನಾಟಕ ಸಂಘ ವಿಶೇಷವಾದ



ಪ್ರೋತ್ಸಾಹ ನೀಡುತ್ತಾ ನಮ್ಮ ಊರಿನ ಕಲೆಯನ್ನು ಅಭಿವೃದ್ಧಿಗೊಳಿಸುತ್ತ, ಇಲ್ಲಿರುವ ಎಲ್ಲಾ ಕನ್ನಡಿಗರನ್ನು ಪ್ರೋತ್ಸಾಹ ನೀಡುತ್ತಾ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಾ ಇದೆ. ಮನುಷ್ಯ ಮೂಲತಃ ಸಂಘ ಜೀವಿ. ನಾವು ಸಂಘದಲ್ಲಿ ಸಂಘಟಿತರಾಗಿ ಜೀವನ ಮಾಡುವುದೇ ಮೂಲ ಉದ್ದೇಶ ಎಂದರು. ನಾವು ಸುಖೀ ಜೀವನವನ್ನು ನಡೆಸುತ್ತಿದ್ದೇವೆ. ಇದಕ್ಕೆ ಕೇಂದ್ರ ಬಿಂದುವಾಗಿರುವ ದೆಹಲಿ ಕರ್ನಾಟಕ ಸಂಘಕ್ಕೆ ನಾವು ಹೆಮ್ಮೆಪಡಬೇಕಾಗುತ್ತದೆ ಎಂದರು.

ಶ್ರೀಮತಿ ಶಾಲನ್ ಮುರಗೋಡ ಅವರು ಮಾತನಾಡುತ್ತ ಒಂದು ಕಡೆಯಿಂದ ನನಗೆ ಬಹಳ ಖುಷಿಯಾಗುತ್ತಿದೆ, ಇನ್ನೊಂದು ಕಡೆಯಿಂದ ಬಹಳ ಬೇಜಾರು ಆಗುತ್ತಿದೆ, ಯಾಕೆಂದರೆ ಭೀಮರಾವ್ ಮುರಗೋಡರ ನಿಧನದಿಂದ. ಸಣ್ಣವಳಿದ್ದಾಗ ನನಗೆ ಚಿತ್ರ ಬರೆಯುವುದು, ನೃತ್ಯ, ನಾಟಕದಲ್ಲಿ ಅಭಿನಯಿಸುವ ಹವ್ಯಾಸ ಇತ್ತು. ಇದೆಲ್ಲಾ ಸಕಾರಗೊಳ್ಳಲು ದೆಹಲಿ ಕರ್ನಾಟಕ ಸಂಘವು ಅವಕಾಶ ನೀಡಿತು. ಇದಕ್ಕೆ ನಾನು ಅಬಾರಿ ಎಂದರು.

ಶ್ರೀ ಕೆ.ಟಿ. ಗಣೇಶ್ ಅವರು ಮಾತನಾಡುತ್ತ, ದೆಹಲಿ ಕನ್ನಡ ಶಾಲೆಯಲ್ಲಿ ಕನ್ನಡ ಮಕ್ಕಳ ಬಹಳ ಕಡಿಮೆ ಇದೆ. ನನ್ನ ವಿನಂತಿ ಏನೆಂದರೆ ಆದಷ್ಟು ಮಕ್ಕಳನ್ನು ಕನ್ನಡ ಶಾಲೆಗೆ ಸೇರಿಸಿ ಎಂದು ವಿನಂತಿಸಿಕೊಂಡರು. ಇವತ್ತಿನ ದಿನದಲ್ಲಿ ಶಾಲೆಯಲ್ಲಿ ಸಾವಿರಕ್ಕಿಂತ ಮಿಕ್ಕಿ ವಿದ್ಯಾರ್ಥಿಗಳಿದ್ದಾರೆ. ಕನ್ನಡ ಶಾಲೆಯ ವಿದ್ಯಾಭ್ಯಾಸ ಅಷ್ಟೇನು ಕೆಟ್ಟದ್ದು ಅಲ್ಲ. ಶಾಲೆಯ ಫಲಿತಾಂಶ ಹಲಗೇಕರ್ ಪ್ರಾಂಶುಪಾಲರಾಗಿದ್ದಾಗ ಪ್ರತಿ ವರ್ಷ ಡೈರೆಕ್ಟರೇಟ್ ಎಜ್ಯುಕೇಶನ್‌ನಿಂದ ಪ್ರಶಂಸ ಪತ್ರ ಬರುತ್ತಿತ್ತು ಎಂದರು. ಇವಾಗಲೂ ನಮ್ಮ ಫಲಿತಾಂಶವನ್ನು ಮೆಚ್ಚುತ್ತಾ ಇದ್ದಾರೆ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶ್ರೀ ಸುಧೀರ್ ಫಡ್ನೀಸ್ ಅವರು ನನಗೆ ನಿಮ್ಮೆಲ್ಲರ ಆಶೀರ್ವಾದದಿಂದ ಭಾರತ ಸರಕಾರದ ಜವಳಿ ಮಂತ್ರಾಲಯದಿಂದ ಈ ಪ್ರಶಸ್ತಿ ದೊರೆತಿದೆ ಎಂದರು.

ಪಿ.ಡಿ. ವಲ್ಸನ್ ಅವರು ಮಾತನಾಡುತ್ತ ದೆಹಲಿ ಕರ್ನಾಟಕ ಸಂಘವು ಸಂಘದ ಪಕ್ಕದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ 'ಸರ್.ಎಂ. ವಿಶ್ವೇಶ್ವರಯ್ಯ' ಮೆಟ್ರೋ ನಿಲ್ದಾಣ ಎಂದು ನಾಮಕರಣ ಮಾಡಿಸಿರುವುದು ತುಂಬಾ ಶ್ಲಾಘನೀಯ ಕೆಲಸ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಮಾಜಿ ಕೇಂದ್ರ ಸಚಿವ ಹಾಗೂ ಚಲನಚಿತ್ರ ನಟ ಶ್ರೀ ಅಂಬರೀಶ್ ಮತ್ತು ಮಾಜಿ ಕೇಂದ್ರ ಸಚಿವ ಶ್ರೀ ಜಾಫರ್ ಷರೀಫ್ ಅವರಿಗೆ ಮೌನ ಆಚರಿಸಲಾಯಿತು.

ಕಾರ್ಯಕ್ರಮವನ್ನು ಶ್ರೀಮತಿ ಪೂಜಾ ಪಿ.ರಾವ್ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಸ್ವಾಗತಿಸಿ ಧನ್ಯವಾದ ಸಲ್ಲಿಸಿದರು.

ಸಂಘದ ಆಟೋಟ ಸ್ಪರ್ಧೆಗಳ ಬಹುಮಾನ ಹಾಗೂ ವಿದ್ಯಾರ್ಥಿ ವೇತನವನ್ನು ವಿತರಣೆ ಮಾಡಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಘದ ಚಿಣ್ಣರಿಂದ ಕೃಷಿ ಆಧಾರಿತ ನೃತ್ಯ ಕಾರ್ಯಕ್ರಮ ನಡೆಯಿತು. ಅ

***ಅಭಿಮತ ವರದಿ***



# ದೇಶದ ಮಹಾನ್ ಇಂಜಿನಿಯರ್‌ಗಳಲ್ಲಿ ಪ್ರಮುಖರಾಗಿರುವ ಹೆಮ್ಮೆಯ ಕನ್ನಡಿಗ

## ಎನ್.ಎ. ಮಾಧವ

ನಿಡ್ಯಮಲೆ ಅಪ್ಪಯ್ಯ ಮಾಧವ ಅವರು ಭಾಗಮಂಡಲ-ತಲಕಾವೇರಿಯ ಕೊಡಗಿನವರು. ಅವರು 1945 ಮೇ 29ರಂದು ನಿಡ್ಯಮಲೆ ಅಪ್ಪಯ್ಯ ಮತ್ತು ಅಮ್ಮಪ್ಪ ದಂಪತಿಯ ಪುತ್ರನಾಗಿ ಜನಿಸಿದರು. ಸುಮಾರು ಮೂರು ದಶಕಗಳ ಕಾಲ ಬಂದರು ಮತ್ತು ಸಮುದ್ರತೀರದ ತೈಲೋದ್ಯಮದ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಅವರು ಕೆಲಸ ಮಾಡಿರುವರು. ದೇಶದ ಪ್ರತಿಷ್ಠಿತ ಇಂಜಿನಿಯರಿಂಗ್ ಡಿಸೈನ್ ಸಂಸ್ಥೆ ಇಂಜಿನಿಯರ್ಸ್ ಇಂಡಿಯಾ ಲಿಮಿಟೆಡ್‌ನಲ್ಲಿ ಅವರು 1974ರಿಂದ 2001ರವರೆಗೆ ಕೆಲಸ ಮಾಡಿ ಇದೀಗ ಅನೇಕ ಸಂಸ್ಥೆಗಳಿಗೆ ಸಲಹೆಗಾರರಾಗಿ ಮಹನ್ನತವಾದ ಕೊಡುಗೆಯನ್ನು ನೀಡಿದ್ದಾರೆ. ಹಲವಾರು ಇಂಜಿನಿಯರಿಂಗ್ ಟೆಕ್ನಾಲಜಿ ಸಂಸ್ಥೆಗಳ ಆಜೀವ ಸದಸ್ಯ, ಫೇಲೋ ಮೆಂಬರ್ ಆಗಿ ಕಾರ್ಯನಿರ್ವಹಿಸುವುದರೊಂದಿಗೆ ಟೆಕ್ನಿಕಲ್ ಮ್ಯಾಗಝಿನ್, ಕಾನ್ಫರೆನ್ಸ್, ಸೆಮಿನಾರ್‌ಗಳಿಗೆ ಬರಹಗಳನ್ನು ನೀಡುವುದರೊಂದಿಗೆ ಕಾನ್ಫರೆನ್ಸ್, ಸೆಮಿನಾರ್, ಡೆಲಿಗೇಶನ್‌ಗಳಲ್ಲಿ ಭಾಗವಹಿಸುತ್ತಾ ವಿಶೇಷ ಕೊಡುಗೆಯನ್ನು ನೀಡುತ್ತಾ ಬರುತ್ತಿದ್ದಾರೆ. ಟೆಕ್ನಾಲಜಿ ಜೊತೆಯಲ್ಲಿ ಸಾಮಾಜಿಕ ಕ್ಷೇತ್ರದಲ್ಲಿಯೂ ತೊಡಗಿಕೊಂಡಿರುವರು.

ಮಾಧವ ಅವರ ಮನೆತನ ಹಿರಿದಾದರೂ ಅವರು ಬಡತನದಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಭಾಗಮಂಡಲದಲ್ಲಿ ಸರ್ಕಾರಿ ಶಾಲೆಯಲ್ಲಿ 1950-58ರಲ್ಲಿ ಮಾಡಿದರು. ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಮುಂದೆ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಸೆಂಟ್ರಲ್ ಹೈಸ್ಕೂಲ್ ಮಡಿಕೇರಿಯಲ್ಲಿ ಮಾಡಿದರು. ಅವರು ಕರ್ನಾಟಕ ರಿಜಿನಲ್ ಇಂಜಿನಿಯರಿಂಗ್ ಕಾಲೇಜ್ (ಕೆ.ಆರ್.ಇ.ಸಿ) ಈಗ ಎನ್‌ಐಟಿ - ಸುರತ್ಕಲ್‌ನಲ್ಲಿ 1968ರಲ್ಲಿ ಬಿ.ಇ. ಪದವಿಯನ್ನು ಪಡೆದರು.



ಅವರು ಮೆರಿನ್ ಸ್ಟ್ರಕ್ಚರ್ಸ್‌ನಲ್ಲಿ ಎಂ.ಟೆಕ್. ಪದವಿಯನ್ನು 1970ರಲ್ಲಿ ಕೆ.ಆರ್.ಇ.ಸಿ.ಯಲ್ಲಿಯೇ ಪಡೆದರು.

ತಮ್ಮ ವೃತ್ತಿ ಜೀವನವನ್ನು ಪಣಂಬೂರಿನಲ್ಲಿ ಆಗತಾನೇ ಪ್ರಾರಂಭವಾದ ಮಂಗಳೂರು ಹಾರ್ಬರ್ ಪ್ರೊಜೆಕ್ಟ್‌ನಲ್ಲಿ ಪ್ರಾರಂಭಿಸಿದರು. ನಂತರ ಮುಂಬಯಿಯಲ್ಲಿ ಟಾಟಾ ಕನ್ಸಲ್ಟಿಂಗ್ ಇಂಜಿನಿಯರ್ಸ್‌ನಲ್ಲಿ ಎರಡು ವರ್ಷ ಕೆಲಸ ಮಾಡಿದರು. ಅವರು ತಮ್ಮ ವೃತ್ತಿಜೀವನದಲ್ಲಿ ದೇಶಾದ್ಯಂತ ಉನ್ನತ ಶ್ರೇಣಿಯಲ್ಲಿರುವ ಅತ್ಯುತ್ತಮ ನೂರು ಮಂದಿಯಲ್ಲಿ ಒಬ್ಬರಾಗಿದ್ದಾರೆ.

ಅವರು 1974ರಲ್ಲಿ ದೆಹಲಿಗೆ ಬಂದಾಗಿನಿಂದ ಸಮಾಜದ ಹಿತಚಿಂತನೆಗಳಲ್ಲಿ ತೊಡಗಿಕೊಂಡಿರುವರು. ದೆಹಲಿಯ ಕನ್ನಡ ಮತ್ತು ಇತರ ಸಂಘ ಸಂಸ್ಥೆಗಳಲ್ಲಿ ಕಾರ್ಯನಿರತರಾಗಿರುವರು. 1994 ರಿಂದ 2004ರ ಅವಧಿಯಲ್ಲಿ ಎರಡು ಬಾರಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿದ್ದರು. ಸಂಘದ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣದಲ್ಲಿ ಇವರ ಪಾತ್ರ ಮಹತ್ತರವಾದುದು. ಸಂಘದ ಕಾವಲು ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುವರು ಹಾಗೂ ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿಕೊಂಡು ಬರುವುದರ ಜೊತೆಯಲ್ಲಿ ಇತರ ಸದಸ್ಯರಿಗೂ ಉತ್ತೇಜನ ಹಾಗೂ ಪ್ರೋತ್ಸಾಹ ಕೊಡುತ್ತಾ ಬರುತ್ತಿರುವರು. ದೆಹಲಿ ಗೌಡ ಸಮಾಜದ ಸಂಸ್ಥಾಪಕ ಸದಸ್ಯರು ಮತ್ತು ಅಧ್ಯಕ್ಷರು ಮುಂದೆ ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾಗಿಯೂ, ಸಲಹೆಗಾರರಾಗಿಯೂ ಸೇವೆ ಸಲ್ಲಿಸುತ್ತಿರುವರು. ಅಲ್ಲದೆ ದೆಹಲಿಯ ಎಲ್ಲಾ ಪಂಗಡಗಳ ಸಂಘ ಸಂಸ್ಥೆಗಳೊಂದಿಗೆ ಸೌಹಾರ್ದತೆಯಿಂದ ಮುನ್ನಡೆಯುತ್ತಿರುವರು. ದೆಹಲಿಯ ಕನ್ನಡಿಗರ ಚಟುವಟಿಕೆಗಳಿಗೆ ಕೇಂದ್ರ ಬಿಂದು ಆಗಿರುವ ದೆಹಲಿ ಕರ್ನಾಟಕ ಸಂಘದ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ತಮ್ಮ ಅಪಾರ ಕೊಡುಗೆಯನ್ನು ನೀಡುತ್ತಿರುವರು. ಸಿವಿಲ್ ಸೊಸೈಟಿಯ ಅಭಿವೃದ್ಧಿಗಾಗಿ ಕರ್ನಾಟಕದ ಸಿವಿಲ್ ಸರ್ವಿಸ್ ಆಕಾಂಕ್ಷಿಗಳಿಗಾಗಿ ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಇದರ ಅಧ್ಯಕ್ಷರಾಗಿ ಕಳೆದ ಏಳೆಂಟು ವರ್ಷಗಳಿಂದ ಅಪಾರ ಸೇವೆಯನ್ನು ಮಾಡುತ್ತಿರುವರು. ಅ

**ಅಭಿಮತ ವರದಿ**



# ದೆಹಲಿ ಕನ್ನಡ ಶಾಲೆಯ ನಿವೃತ್ತ ಪ್ರಾಂಶುಪಾಲ

## ಕೆ.ಟಿ. ಗಣೇಶ್

ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್‌ನ ಪ್ರಾಂಶುಪಾಲರಾಗಿ ನಿವೃತ್ತರಾಗಿರುವ ಕೆ.ಟಿ ಗಣೇಶ್ ಅವರು ಕೊಡಗು ಜಿಲ್ಲೆಯ ಅಮ್ಮತೀ–ಒಂಟಿಅಂಗಡಿಯ ಕೋರಂಡ ಎಸ್. ತಿಮ್ಮಯ್ಯ ಮತ್ತು ಕೆ.ಟಿ. ಅಕ್ಕಮ್ಮ ಅವರ ಪುತ್ರ. ಅವರು ಪಿ.ಯು.ಸಿವರೆಗಿನ ವಿದ್ಯಾಭ್ಯಾಸವನ್ನು ಕೊಡಗಿನಲ್ಲಿ ಮುಗಿಸಿ ಸ್ನಾತಕೋತ್ತರ ಪದವಿಯನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪಡೆದರು. ಶಾಲೆ ಮತ್ತು ಕಾಲೇಜಿನಲ್ಲಿರುವಾಗ ಹಾಕಿ ಆಟದಲ್ಲಿ ಉತ್ತಮ ಕ್ರೀಡಾಪಟುವಾಗಿದ್ದ ಅವರು ಅದರಲ್ಲಿ ಅನೇಕ ಬಹುಮಾನಗಳನ್ನು ತಮ್ಮದಾಗಿಸಿಕೊಂಡಿದ್ದರು. ಅಲ್ಲದೇ ಅವರು ಇತರ ಆಟಗಳಲ್ಲಿಯೂ ಆಸಕ್ತಿಹೊಂದಿದ್ದರು.

ಉದ್ಯೋಗವನ್ನು ಅರಸಿ 1981ರ ಕೊನೆಯಲ್ಲಿ ದೆಹಲಿಗೆ ಆಗಮಿಸಿದ ಇವರು ಅಗಸ್ಟ್ 1983ರಲ್ಲಿ ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್‌ಗೆ ಅಧ್ಯಾಪಕರಾಗಿ ನೇಮಕಗೊಂಡರು. ಶಾಲೆಯಲ್ಲಿ ಸೇವೆ ಸಲ್ಲಿಸಿರುತ್ತಿರುವಾಗಲೇ ಬಿ.ಎಡ್ ಹಾಗೂ ಪೋಸ್ಟ್ ಗ್ರಾಜ್ಯುಯೇಶನ್ ಶಿಕ್ಷಣವನ್ನು ಪಡೆದರು. ನಂತರ ಶಾಲೆಯಲ್ಲಿ ಲೆಕ್ಚರರ್ ಆಗಿ ಬಡ್ತಿ ಹೊಂದಿದರು. 2010ರ ನಂತರ ಶಾಲೆಗೆ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ 2017, ಸೆಪ್ಟೆಂಬರ್ 30ರಂದು ಹುದ್ದೆಯಿಂದ ನಿವೃತ್ತರಾದರು. ಇವರ ಕಾಲಾವಧಿಯಲ್ಲಿ 10 ಮತ್ತು 12ನೇ ತರಗತಿಯ ಫಲಿತಾಂಶವು ಪ್ರತೀ ವರ್ಷವೂ ಉತ್ತಮವಾಗಿ ಹೊರಬೀಳುತ್ತಿತ್ತು. ಜೊತೆಗೆ ದೆಹಲಿ ಕನ್ನಡ ಶಾಲೆ ಶಿಕ್ಷಣಮಟ್ಟದಲ್ಲಿ ಉತ್ತಮ ಶೃಂಗಕ್ಕೇರಿತ್ತು.

ಶಾಲಾ ಮಕ್ಕಳಿಗೆ ಆಟೋಟ ಹಾಗೂ ಮತ್ತಿತರ ಚಟುವಟಿಕೆಗಳಲ್ಲಿ ಹುರಿದುಂಬಿಸುತ್ತಿದ್ದರು. ಆಟೋಟ ಹಾಗೂ ಇತರ ಚಟುವಟಿಕೆಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಬಹುಮಾನವನ್ನು ಗಳಿಸಿದ್ದನ್ನು ನೆನಪಿಸಬಹುದು. ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕ ವರ್ಗಕ್ಕೆ ಒಳ್ಳೆಯ ಶಿಸ್ತಿನ ಸಿಪಾಯಿಯಾಗಿದ್ದರು. ಸರಕಾರದ ಅನುಮತಿಯಿಂದ ಶಾಲೆಯಲ್ಲಿ ಖಾಲಿಯಿದ್ದ ಹುದ್ದೆಗಳನ್ನು ಭರ್ತಿಗೊಳಿಸಲು ಇವರ ಪಟ್ಟ ಶ್ರಮ ಅಪರಿಮಿತವಾದುದು.

ಇವರು ವಿದ್ಯಾಸಂಸ್ಥೆಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ 'ದೆಹಲಿ ಕನ್ನಡಿಗ' ಪತ್ರಿಕೆಯು ಇವರನ್ನು ಅಭಿನಂದಿಸಿದೆ. ಇದಲ್ಲದೆ 'ಅಪ್ನಾದೇಶ್ ಸಮಾಚಾರ್ ಹಾಗೂ ದೇಶಹಿತ' ಪತ್ರಿಕೆಯು ದೆಹಲಿಯಲ್ಲಿ 2015ರ ನವಂಬರ್ 16ರಂದು ಆಯೋಜಿಸಿದ 'ನ್ಯಾಶನಲ್ ಪ್ರೆಸ್ ಡೇ–2015' ಸಮಾರಂಭದಲ್ಲಿ 'ಅತೀ ಉನ್ನತ ಕನ್ನಡಿಗ' ಎಂದು ಪುರಸ್ಕರಿಸಿದೆ. ಕನ್ನಡ ಶಾಲೆಯಲ್ಲಿನ ಇವರ ಸಾಧನೆಗಳನ್ನು ಗುರುತಿಸಿ ದೆಹಲಿಯ ಆಂಧ್ರ ಎಜ್ಯುಕೇಷನ್ ಸೊಸೈಟಿಯು ತನ್ನ ಎರಡು ಶಾಲೆಗಳಿಗೆ ಚೀಫ್ ಕೋಆರ್ಡಿನೇಟರ್ ಆಗಿ ಅವರ ನಿವೃತ್ತಿಯ ನಂತರ ನೇಮಕ ಮಾಡಿಕೊಂಡಿದೆ. ಅ

**ಅಭಿಮತ ವರದಿ**





# ಚಿತ್ರಕಲೆಯಲ್ಲಿ ಅಪೂರ್ವ ಸಾಧನೆ ಮಾಡಿರುವ ಶಾಲನ್ ಮುರಗೋಡ

ತೈಲವರ್ಣಚಿತ್ರಗಳು, ಭಾವಚಿತ್ರಗಳು ಮತ್ತು ಕಲೆಯಲ್ಲಿ ಪರಿಣಿತರಾಗಿರುವ ಶಾಲನ್ ಮುರಗೋಡ ಅವರು ಹಲವಾರು ಚಿತ್ರಪ್ರದರ್ಶನಗಳಲ್ಲಿ ಭಾಗವಹಿಸಿ ಕಲಾರಸಿಕರ ಮನಗೆದ್ದಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಅವರು ದೆಹಲಿಯ ಹಲವಾರು ಕನ್ನಡದ ಸಂಘ ಸಂಸ್ಥೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರೆ. ವಿವಿಧ ಕನ್ನಡ ನಾಟಕಗಳಲ್ಲಿ ಪಾತ್ರ ವಹಿಸಿರುವ ಅವರು ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಭಾಗವಹಿಸಿದ್ದಾರೆ.

ಅವರು 2010ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಫರ್ಮ್ ಸಿಟಿ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕ್ಯಾನ್‌ವಾಸ್ ಆರ್ಟ್ ಗ್ಯಾಲರಿ, ಹ್ಯಾಬಿಟೇಟ್ ಸೆಂಟರ್, ರವೀಂದ್ರ ಭವನ, ತ್ರಿವೇಣಿ ಆರ್ಟ್ ಗ್ಯಾಲರಿ, ದೆಹಲಿ ಕರ್ನಾಟಕ ಸಂಘದಲ್ಲಿ ಅನೇಕ ಗ್ರೂಪ್ ಶೋಗಳನ್ನು ನೀಡಿದ್ದಾರೆ. ಇವರು ಚಿತ್ರಕಲೆಯ ಜೊತೆಗೆ 2012ರಲ್ಲಿ ಅನೇಕ ಮೂರ್ತಿಗಳನ್ನು ರಚಿಸಿದ್ದಾರೆ. ಭಗವಾನ್ ಬುದ್ಧನ ಮೂರ್ತಿ, ಹಾಗೂ ತಮ್ಮ ಪತಿ ಅಂತರರಾಷ್ಟ್ರೀಯ ಚಿತ್ರ ಕಲಾವಿದ. ಭೀಮರಾವ್ ಮುರಗೋಡರ ಮೂರ್ತಿ ಹಾಗೂ ಭಾವಚಿತ್ರಗಳನ್ನು ರಚಿಸಿದ್ದಾರೆ. ಡಾ. ಅಂಬೇಡ್ಕರ್, ಭಾರತೀಯ ಯೋಗ ಸಂಸ್ಥಾನದ ಸಂಸ್ಥಾಪಕರಾದ ಪ್ರಕಾಶ್‌ಲಾಲ್‌ರವರ ಭಾವಚಿತ್ರವನ್ನು ಕೂಡಾ ರಚಿಸಿದ್ದಾರೆ. 2016ರಲ್ಲಿ ಲೋಕಾಯುಕ್ತ ಆರ್ಟ್ ಗ್ಯಾಲರಿ, ಹೌಸ್‌ಕಾಸ್‌ನಲ್ಲಿ ತಮ್ಮ ಚಿತ್ರಕಲೆ ಪ್ರದರ್ಶನ ಮಾಡಿದ್ದಾರೆ. ಇವರು ಎರಡು ವರ್ಷದ ನ್ಯಾಚುರೋಪತಿ ಅಂಡ್ ಯೋಗವನ್ನು ಲಜ್‌ಪತ್ ಭವನನಿಂದ ಮಾಡಿದ್ದಾರೆ. ಅವರ ಚಿತ್ರಕಲೆಗಳು ಹರಪ್ಪಾ ಮೊಹೆಂಜೆದಾರೋ, ಬೇಲೂರು ಹಳೇಬೀಡು ಮತ್ತು ರಾಜಮಹರಾಜರ ಚಿತ್ರಗಳಿಂದ ಪ್ರೇರಣೆಗಳನ್ನು ಪಡೆದಿವೆ.

ಶಾಲನ್ ಮುರಗೋಡ ಅವರು 2012ರಲ್ಲಿ ಹೆಲ್ ಮೇಳಾದಲ್ಲಿ ಪ್ರಶಸ್ತಿ ಪಡೆದಿದ್ದಾರೆ. 2014–15ರಲ್ಲಿ 'ನಾರಿಶಕ್ತಿ' ಪ್ರಶಸ್ತಿಯನ್ನು ಪಡೆದಿದ್ದಾರೆ. ಬೆಂಗಳೂರಿನ ಚಂದನ ದೂರದರ್ಶನದಲ್ಲಿ ಅಚೀವರ್ಸ್ ಆಫ್ ಕರ್ನಾಟಕ 'ಗರಿ' ಎಂಬ ಪುಸ್ತಕ ಬಿಡುಗಡೆ ಮಾಡಿ ಪ್ರಶಸ್ತಿ ಪಡೆದಿದ್ದಾರೆ. 2013ರಲ್ಲಿ ಐ.ಸಿ.ಸಿ.ಆರ್. ನಲ್ಲಿ ಭಾರತ ಸರ್ಕಾರವು ಚಿತ್ರಕಲಾ ಪ್ರದರ್ಶನ ನಡೆಸಿತು. ಇದರಲ್ಲಿ ಗೆಸ್ಟ್ ಆಗಿದ್ದ ಅಂತರರಾಷ್ಟ್ರೀಯ ಮೂರ್ತಿಕಾರ ರಾಮ್ ವಿ. ಸುತಾರ್‌ರವರು ಶಾಲನ್ ಮುರಗೋಡರ ಗರುಡ, ಶಿವ ಪಾರ್ವತಿಯ ಚಿತ್ರಕಲೆಯನ್ನು ನೋಡಿ ಒಬ್ಬ ಮಹಿಳೆಯ ಮನೆಯ ಜೊತೆಗೆ ಕಷ್ಟಪಟ್ಟು ಮಾಡಿದ ಚಿತ್ರಕಲೆಯನ್ನು ನೋಡಿ ಹೆಮ್ಮೆಪಟ್ಟು ಸುಪ್ತಗಂಗಾ ಎಂಬ ಬಿರುದನ್ನು ನೀಡಿದ್ದಾರೆ. ಪದ್ಮಶ್ರೀ ಕೇಶವ್ ಮಲಿಕ್ ಹಾಗೂ ಹಂಪನಾ ಅವರು ಶಾಲನ್ ಮುರಗೋಡರ ಕಲಾಕೃತಿಗಳನ್ನು ನೋಡಿ ಸಂತೋಷಪಟ್ಟಿದ್ದಾರೆ. ಬೆಂಗಳೂರಿನ ದೂರದರ್ಶನ ಚಂದನ ಟಿ.ವಿ.ಯಲ್ಲಿ ಅನೇಕ ಬಾರಿ ಸಂದರ್ಶನವನ್ನು ನೀಡಿದ್ದಾರೆ. ಟೈಮ್ಸ್ ಆಫ್ ಇಂಡಿಯಾ, ತರುಣ್ ಭಾರತ್, ಹಿಂದೂಸ್ತಾನ್ ಟೈಮ್ಸ್, ದೈನಿಕ್ ಜಾಗರನ್, ಅಭಿಮತದಲ್ಲಿ ಇವರ ಚಿತ್ರಕಲೆ ಮೂಡಿಬಂದಿದೆ.

ನಾಟಕ, ನೃತ್ಯ, ಸಮೂಹಗಾನ ಹವ್ಯಾಸಿಯಾಗಿರುವ ಶಾಲನ್ ಮುರಗೋಡ ಅವರು ಕ್ರೀಡೆಯಲ್ಲಿ ಅನೇಕ ಪದಕಗಳನ್ನು ಪಡೆದಿದ್ದಾರೆ.

ತಮ್ಮ ಪಿ.ಯು.ಸಿ. ವಿದ್ಯಾಭ್ಯಾಸವನ್ನು ಮುಗಿಸಿ ಅಂತರರಾಷ್ಟ್ರೀಯ ಚಿತ್ರ ಕಲಾವಿದ ಭೀಮರಾವ್ ಮುರಗೋಡರಿಗೆ 1974ರಲ್ಲಿ ವಿವಾಹವಾಗಿ ಸುಮಾರು 45 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದಾರೆ. 1956ರಲ್ಲಿ ಕರ್ನಾಟಕದ ಬೆಳಗಾಂ ಜಿಲ್ಲೆಯಲ್ಲಿ ಜನಿಸಿದ ಇವರ ಪತಿ ಪ್ರಸಿದ್ಧ ಚಿತ್ರಕಲಾವಿದ ಭೀಮರಾವ್ ಮುರಗೋಡ ಅವರು ಇತ್ತೀಚೆಗೆ ನಿಧನರಾದರು. ಇವರಿಗೆ ಸ್ವರೂಪ್, ಮೊನಾಲಿಸಾ, ಸಾಮ್ರಾಟ್ ಅಶೋಕ್ ಗೌತಮ್ ಮೂರು ಜನ ಮಕ್ಕಳು. ಅವರು ತಮ್ಮ 30ನೇ ವಯಸ್ಸಿನಲ್ಲಿ 1984ರಲ್ಲಿ ಜಾಮಿಯಾ ಮಿಲಿಯಾ ಇಸ್ಲಾಮಿಯಾ, ನವದೆಹಲಿಯಲ್ಲಿ ಡಿಗ್ರಿ ಪಡೆದರು.

ಅವರು 'ಇಫೆಕ್ಟ್ ಟು ಸೇವ್ ಹೆಲ್ತ್' ಬೀದಿ ನಾಟಕವನ್ನು ಮಾಡಿದ್ದಾರೆ. ಕನ್ಸ್ಯೂಮರ್ ಇಂಡಿಯಾ ಹ್ಯಾಬಿಟೇಟ್ ಸೆಂಟರ್‌ನ ಸದಸ್ಯರೂ ಆಗಿದ್ದಾರೆ. 2016ರಲ್ಲಿ ಸರ್ವಿಸ್ ಮುಗಿಸಿ ಶಾಲನ್ ಮುರಗೋಡರು ಎರಡು ವರ್ಷ ರಿಟೆನ್ಷನ್ ಪಡೆದು ಜುಲೈ 2018ರಲ್ಲಿ ನಿವೃತ್ತಿ ಹೊಂದಿದ್ದಾರೆ. ಇವರು ಸದ್ಯದಲ್ಲಿ ದೆಹಲಿ, ಬೆಂಗಳೂರು ಹಾಗೂ ಬೆಳಗಾಂನಲ್ಲಿ ನಿಶುಲ್ಕ ಸೇವೆಯಲ್ಲಿ ಯೋಗಾಭ್ಯಾಸವನ್ನು ನೀಡುತ್ತಿದ್ದಾರೆ.

*ಅಭಿಮತ ವರದಿ*



# ಸಂಘದ ವಾರ್ಷಿಕೋತ್ಸವದ ಅಂಗವಾಗಿ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು

ದೆಹಲಿ ಕರ್ನಾಟಕ ಸಂಘದ 2018–19ನೇ ಸಾಲಿನ ವಿವಿಧ ಆಟೋಟ ಸ್ಪರ್ಧೆಗಳು ನವೆಂಬರ್ 27 ಮತ್ತು 28, 2018ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮೈದಾನದಲ್ಲಿ ನಡೆಯಿತು. ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಶಿಸ್ತುಬದ್ಧವಾಗಿ ನಡೆಸಿಕೊಟ್ಟರು. ಕನ್ನಡ ಶಾಲೆಯ ಶಾರೀರಿಕ ಶಿಕ್ಷಕರಾದ ಶ್ರೀ ಶಿವರಾಮ್ ಅವರು ಸಹಕರಿಸಿದರು.

ವಿವಿಧ ಆಂತರಿಕ ಕ್ರೀಡಾ ಸ್ಪರ್ಧೆ ನವೆಂಬರ್ 3 ಮತ್ತು 11ರಂದು ನಡೆಯಿತು. ಕೇರಂ ಮತ್ತು ಚೆಸ್ ಸ್ಪರ್ಧೆಗಳನ್ನು ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ತ್ಯಾಗೇಶ್ ಮೂರ್ತಿ ಹಾಗೂ ಸಂಘದ ಆಜೀವ ಸದಸ್ಯರಾದ ಶ್ರೀ ಪಿ. ದಿನೇಶ್ ಅವರು ನಡೆಸಿಕೊಟ್ಟರು. ಅದೇ ದಿನ ನಡೆದ ಸ್ಮರಣಶಕ್ತಿ ಪರೀಕ್ಷೆ ಮತ್ತು ಚಿತ್ರ ಬರೆಯುವ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ ಮತ್ತು ಶ್ರೀಮತಿ ಪೂಜಾ ಪಿ. ರಾವ್ ಅವರು ನಡೆಸಿಕೊಟ್ಟರು.

ನವೆಂಬರ್ 25ರಂದು ರಂಗೋಲಿ ಸ್ಪರ್ಧೆಯನ್ನು ಶ್ರೀಮತಿ ಪೂಜಾ ಪಿ. ರಾವ್ ಅವರು ನಡೆಸಿಕೊಟ್ಟರು. ಕ್ವಿಜ್ ಸ್ಪರ್ಧೆಯನ್ನು ಶ್ರೀ ಸಂಜೀವ ದೇಶಪಾಂಡೆ, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ನಡೆಸಿಕೊಟ್ಟರು. ಶ್ರೀ ಚೆನ್ನು ಎಸ್.ಮಠದ, ಶ್ರೀಮತಿ ರಾಜೇಶ್ವರಿ ಭಟ್, ಡಾ. ಗಾಯತ್ರಿ ಅವರುಗಳು ನಿರ್ಣಯಕರುಗಳಾಗಿದ್ದರು.



## ವಿದ್ಯಾರ್ಥಿ ವೇತನ ವಿತರಣೆ

ದೆಹಲಿ ಕರ್ನಾಟಕ ಸಂಘದಿಂದ ನೀಡಲಾಗುವ ವಿದ್ಯಾರ್ಥಿವೇತನವನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಲಾಯಿತು. ಒಂದರಿಂದ ಹನ್ನೆರಡನೇ ತರಗತಿಗಳಲ್ಲಿ ಅಧ್ಯಯನ ನಡೆಸುತ್ತಿರುವ ಕೀರ್ತನ್ ಪಿ., ಸಹನಾ ಮಷಿತ, ಅದಿತಿ ಎ. ಪೂಜಾರಿ, ಅನಿಕಾ ಶೆಟ್ಟಿ, ಅರವಿಂದ ಕುಮಾರ್ ಬಿರಾದಾರ, ಆದಿಶ್ರೀ ಎಸ್. ಗೌಡ, ಆಶೀರ್ವಾದ ಎ. ಪೂಜಾರಿ ಮತ್ತು ಶ್ರುತಿ ಭಜಂತ್ರಿ ಅವರಿಗೆ ನೀಡಲಾಯಿತು.

ಸಂಘದ ಮಾಜಿ ಅಧ್ಯಕ್ಷರುಗಳ ಸ್ಮರಣಾರ್ಥ ನೀಡಲಾದ ವಿದ್ಯಾರ್ಥಿ ವೇತನಗಳನ್ನು ಪಡೆದವರು–ಕೆ. ಎಂ. ಅಮೋಘ **(ನರಹರಿ ರಾವ್)**, ಶ್ರೇಷ್ಠಾ ಎಚ್. ತೇಲಿ **(ವಿ.ಕೆ.ಆರ್.ವಿ. ರಾವ್)**, ಮಹೇಶ್ ಆರ್ **(ಎ.ಪಿ. ಕುಮಟಾಕರ್)**, ಮಹೇಶ್ ಕುಮಾರ್ ಶಾಂತಕುಮಾರ್ ನಿಂಬಾಳ್**(ಎ.ವಿ. ಪೈ)**, ಸಿ. ಮನೀತ್ **(ರಾಘವನ್)**, ಸಾಯಿಪ್ರಸಾದ್ ಬಿ. **(ಜಿ.ವೈ. ಕೃಷ್ಣನ್)**, ಬಿ.ಎನ್. ದೀಪಾಂಕನ್ **(ಗೋಪಾಲ ಶಾಸ್ತ್ರಿ)**, ಸ್ವಾತಿ ಲಕ್ಷ್ಮೀನಾರಾಯಣ ಹೆಗಡೆ **(ಐ. ರಾಮಮೋಹನ ರಾವ್)**, ದೀಪ್ತಿಕಾ ಗಣೇಶ್ **(ಕೃಷ್ಣಮೂರ್ತಿ ರಾವ್)**.

ಸಂಘದ ಮಾಜಿ ಅಧ್ಯಕ್ಷ ಕೆ.ಆರ್. ನಾಗರಾಜ ಅವರ ಸ್ಮರಣಾರ್ಥ ವಿದ್ಯಾರ್ಥಿ ವೇತನವನ್ನು ಹರ್ಷಿತ್ ಮತ್ತು ಗೌರವ್ ಅವರಿಗೆ ವಿತರಿಸಲಾಯಿತು. ದಿ. ಶ್ರೀ ಈಶ್ವರಪ್ಪ ಮುರಗೋಡ ಮತ್ತು ದಿ. ಶ್ರೀ ಅಶ್ವಥ್ ಸ್ಮಾರಕ ವಿದ್ಯಾರ್ಥಿ ವೇತನವನ್ನು ಮಹೇಶ್ ಆರ್. ಅವರಿಗೆ ನೀಡಲಾಯಿತು.

ಇದೇ ಸಂದರ್ಭದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ 33 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಿ ಪ್ರೋತ್ಸಾಹಿಸಲಾಯಿತು. ಅ

***ಅಭಿಮತ ವರದಿ***

## ವಿವಿಧ ಸ್ಪರ್ಧೆಗಳ ಬಹುಮಾನ ವಿಜೇತರು

**ಲಗೋರಿ :** ಪ್ರಥಮ : ದೆಹಲಿ ತುಳುಸಿರಿ–ಪ್ರಥಮ, ದ್ವಿತೀಯ : ನಾಡಪ್ರಭು ಕೆಂಪೇಗೌಡ ಫೌಂಡೇಶನ್

**ಥ್ರೋಬಾಲ್ :** ಪ್ರಥಮ : ದೆಹಲಿ ತುಳುಸಿರಿ, ರನ್ನರ್ ಅಪ್ : ಗುರುಗಾಂವ್

**ವಾಲಿಬಾಲ್ :** ಪ್ರಥಮ–ಗುರುಗಾಂವ್ ತಂಡ, ರನ್ನರ್ ಅಪ್–ಬೆಳ್ಳಿಯಪ್ಪ ಗ್ರೂಪ್ಸ್

**ಕಬಡ್ಡಿ :** ಪ್ರಥಮ–ಬೆಳ್ಳಿಯಪ್ಪ ಗ್ರೂಪ್ಸ್, ರನ್ನರ್ ಅಪ್–ಗುರುಗಾಂವ್ ತಂಡ

**ಬಾಲ್ ಇನ್ ಬಕೆಟ್ :** (ಹುಡುಗಿಯರು) ಪ್ರಥಮ–ಅನನ್ಯ ನಾಗರಾಜ, ದ್ವಿತೀಯ–ಭೂಮಿಕ ರಂಜಿತ್, ತೃತೀಯ–ಶ್ರುತಿ ಪ್ರಭಾಕರ್

**50ಮೀ. ಓಟ :** (6–8 ವರ್ಷ ಹುಡುಗರು)

ಪ್ರಥಮ–ಗೋಪಾಲ್ ತಲವಾರ್, ದ್ವಿತೀಯ–ತರುಣ್ ಎಂ., ತೃತೀಯ–ಕೀರ್ತನಾ

**50ಮೀ. ಓಟ :** (6–10 ವರ್ಷ ಹುಡುಗರು)

ಪ್ರಥಮ–ಸಾಯಿ ಅಮರ್ತ್ಯ, ದ್ವಿತೀಯ–ಶ್ರೇಯಸ್ ಪಾಟೀಲ್, ತೃತೀಯ–ಸಾಯಿ ಅನ್ಶ್

**50ಮೀ. ಓಟ :** (7–10 ವರ್ಷ ಹುಡುಗಿಯರು)

ಪ್ರಥಮ–ರಿಯಾ ಚಂದ್ರು, ದ್ವಿತೀಯ–ಕೀರ್ತನಾ ಲಕ್ಷ್ಮಣ್ ಕಟ್ಟಿಮನಿ, ತೃತೀಯ–ಸಹನಾ ತಿಮ್ಮಪ್ಪ

**50ಮೀ. ಓಟ :** (4–7 ವರ್ಷ ಹುಡುಗಿಯರು)

ಪ್ರಥಮ–ಸೃಷ್ಟಿ ಪೂಜಾರಿ, ದ್ವಿತೀಯ–ನಂದಿತಾ ಹುಬಾಳೆ, ತೃತೀಯ–ಶ್ರೇಯಾ ಚಂದ್ರು

**ಬಾಲ್ ಇನ್ ಬಕೆಟ್ :** (6–10 ವರ್ಷ ಹುಡುಗಿಯರು) ಪ್ರಥಮ–ಕೀರ್ತನಾ ಲಕ್ಷ್ಮಣ್ ಕಟ್ಟಿಮನಿ ಮತ್ತು ಸಂಚಿತಾ ರಾಜ್‌ಕುಮಾರ್, ದ್ವಿತೀಯ–ರಿಯಾ ಚಂದ್ರು, ತೃತೀಯ–ಸೃಷ್ಟಿ ಪೂಜಾರಿ

**ಮೂರು ಕಾಲಿನ ಓಟ :** (8 ವರ್ಷಕ್ಕಿಂತ ಕೆಳಗಿನ ಹುಡುಗರು) ಪ್ರಥಮ–ಮಧುಸೂಧನ್ ಮತ್ತು ಸಾತ್ವಿಕ್ ತೇಲಿ, ದ್ವಿತೀಯ–ಸಾಯಿ ಅನ್‌ಶ್ ಮತ್ತು ಸುಮಂತ್, ತೃತೀಯ–ಅಭಿರಾಮ್ ಮತ್ತು ಪೋಷಿತ್ ಕೃಷ್ಣಾ

**ಬಾಲ್ ಇನ್ ಬಕೆಟ್ :** (6–10 ವರ್ಷ ಹುಡುಗರು) ಪ್ರಥಮ–ಪುವಿತ್, ದ್ವಿತೀಯ–ತರುಣ್ ಎಂ., ತೃತೀಯ–ಸಾತ್ವಿಕ್ ಎಚ್. ತೇಲಿ

**ಸ್ಮರಣಶಕ್ತಿ ಪರೀಕ್ಷೆ :** (7–10 ವರ್ಷ) ಪ್ರಥಮ–ಸಾತ್ವಿಕ್ ಎಚ್. ತೇಲಿ, ದ್ವಿತೀಯ–ಮಧುಸೂಧನ್, ತೃತೀಯ–ಸೂಕ್ಷ್ಮ ನಿಂಬಾಳ್

**ಛದ್ಮವೇಷ ಸ್ಪರ್ಧೆ :** (6 ವರ್ಷಕ್ಕಿಂತ ಕೆಳಗಿನ ಮಕ್ಕಳು) ಪ್ರಥಮ–ಸೃಷ್ಟಿ ಪೂಜಾರಿ, ದ್ವಿತೀಯ–ರೋಶಿನಿ ಗೌಡ, ತೃತೀಯ–ನಂದಿತಾ ಹುಬಾಳೆ

**ಕನ್ನಡ ಪದ್ಯ :** (4–10 ವರ್ಷ) ಪ್ರಥಮ–ಸೃಷ್ಟಿ ಪೂಜಾರಿ, ದ್ವಿತೀಯ–ನಂದಿತಾ ಹುಬಾಳೆ, ತೃತೀಯ–ಸೂಷ್ಮ ನಿಂಬಾಳ್ ಮತ್ತು ರೋಶಿನಿ ಗೌಡ

**ಮೂರು ಕಾಲಿನ ಓಟ :** (ಹುಡುಗರು) ಪ್ರಥಮ–ಪೃಥ್ವಿರಾಜ್ ಕಟ್ಟಿಮನಿ ಮತ್ತು ಸೂರಜ್ ತಿಮ್ಮಪ್ಪ, ದ್ವಿತೀಯ–ಸಾಯಿ ಅಮರ್ತ್ಯ ಮತ್ತು ಶ್ರೇಯಸ್, ತೃತೀಯ–ಅಭಿಷೇಕ್ ಹುಬಾಳೆ ಮತ್ತು ಕುಶಾಲ್ ಎಂ.

**ಮೂರುಕಾಲಿನ ಓಟ :** (ಹುಡುಗಿಯರು) ಪ್ರಥಮ : ಕೀರ್ತನಾ ಕಟ್ಟಿಮನಿ, ಸಂಚಿತ ದ್ವಿತೀಯ : ರಿಯ ಮತ್ತು ಶ್ರೇಯಾ ಚಂದ್ರು, ತೃತೀಯ : ಸೌಮ್ಯಶ್ರೀ ಮತ್ತು ಶ್ರುತಿ

**ರಿಲೆ 4x100 ಮೀ :** (ಹುಡುಗರು) ಪ್ರಥಮ–ಚೇತನ್ ಎಂ ಮತ್ತು ತಂಡ, ದ್ವಿತೀಯ–ರೋಹನ್ ರಂಗನಾಥ್ ಮತ್ತು ತಂಡ, ತೃತೀಯ–ಸೂರಜ್ ತಿಮ್ಮಪ್ಪ ಮತ್ತು ತಂಡ

**ರಿಲೆ 4x100** ಮೀ (ಹುಡುಗಿಯರು) ಪ್ರಥಮ–ಚೈತನ್ಯ ಮತ್ತು ತಂಡ, ದ್ವಿತೀಯ–ಚಂದನಾ ಗೌಡ ಮತ್ತು ತಂಡ

**100ಮೀ ಓಟ** (ಹುಡುಗರು) : ಪ್ರಥಮ–ಚೇತನ್ ಎಂ. ರೆಡ್ಡಿ, ದ್ವಿತೀಯ–ಧ್ರುವ್ ಪೂಜಾರಿ, ತೃತೀಯ–ಕೃಷ್ಣ

**100ಮೀ ಓಟ :** (ಹುಡುಗರು) ಪ್ರಥಮ–ರೋಹನ್ ರಂಗನಾಥ್, ದ್ವಿತೀಯ–ಸೂರಜ್ ತಿಮ್ಮಪ್ಪ, ತೃತೀಯ–ರಂಜಿತ್ ರೆಡ್ಡಿ

**100ಮೀ. ಓಟ :** (ಹುಡುಗಿಯರು) ಪ್ರಥಮ–ಚೈತನ್ಯ ಬಿ., ದ್ವಿತೀಯ–ಪ್ರೇರಣಾ ರಾವ್, ತೃತೀಯ–ಅನನ್ಯಾ ರಾಧಾಕೃಷ್ಣ

**200ಮೀ. ಓಟ :** (ಹುಡುಗರು) ಪ್ರಥಮ–ಚೈತನ್ಯ ಎಂ. ರೆಡ್ಡಿ, ದ್ವಿತೀಯ–ರೋಹನ್ ರಂಗನಾಥ್, ತೃತೀಯ–ಕೃಷ್ಣ ಪುರುಷೋತ್ತಮ

**200 ಮೀ. ಓಟ :** (ಹುಡುಗಿಯರು) ಪ್ರಥಮ–ಚೈತನ್ಯ ಬಿ., ದ್ವಿತೀಯ–ಅನನ್ಯಾ ರಾಧಾಕೃಷ್ಣ, ತೃತೀಯ–ಶ್ರೇಯಾ ಮಂಜುನಾಥ

**ಮೂರು ಕಾಲಿನ ಓಟ :** (ಹುಡುಗರು) ಪ್ರಥಮ–ಪ್ರಮೋದ್ ಮತ್ತು ಆದಿತ್ಯ, ದ್ವಿತೀಯ–ಚೇತನ್ ಎಂ ಮತ್ತು ಕೃಷ್ಣ ಪುರುಷೋತ್ತಮ

**ಮೂರು ಕಾಲಿನ ಓಟ :** (ಹುಡುಗಿಯರು) ಪ್ರಥಮ–ಚಂದನಾ ಗೌಡ ಮತ್ತು ಶ್ರೇಯ, ದ್ವಿತೀಯ–ಅನನ್ಯಾ ರಾಧಾಕೃಷ್ಣ ಮತ್ತು ಪ್ರೇರಣಾ ರಾವ್, ತೃತೀಯ–ಶ್ರೀವಿದ್ಯಾ ಮತ್ತು ಯಶಸ್ವಿನಿ

**ಬಾಲ್ ಇನ್ ಬಕೆಟ್ :** (ಹುಡುಗರು)

ಪ್ರಥಮ–ಭುವನ್, ದ್ವಿತೀಯ–ಅಭಿಷೇಕ್ ಎಸ್, ತೃತೀಯ–ಚೇತನ್

**100ಮೀ. ಓಟ :** (ಹುಡುಗರು) ಪ್ರಥಮ–









ಧ್ರುವ್ ಕಾಮ್‌ಶೆಟ್ಟಿ, ದ್ವಿತೀಯ–ನಾಗೇಶ್, ತೃತೀಯ–ಸನ್ಮಾನ್ ಗೌಡ

**100ಮೀ. ಓಟ :** (ಪುರುಷರು) ಪ್ರಥಮ–ಬಿ.ಸಿ. ಮಂಜುನಾಥ್, ದ್ವಿತೀಯ–ಸುರೇಶ್ ಎ ಮತ್ತು ಮಂಜುನಾಥ್ ಎಚ್.ಕೆ., ತೃತೀಯ–ಪಾಪೇಗೌಡ

**ಮ್ಯೂಸಿಕಲ್ ಚೇರ್ :** (ಹುಡುಗಿಯರು)

ಪ್ರಥಮ–ಸಂಚಿತಾ ರಾಜ್‌ಕುಮಾರ್, ದ್ವಿತೀಯ–ಶ್ರುತಿ, ತೃತೀಯ–ಶ್ರೀವಿದ್ಯಾ

**ಮ್ಯೂಸಿಕಲ್ ಚೇರ್ :** (ಮಹಿಳೆಯರು) ಪ್ರಥಮ–ಮಾಲಾ ರಮೇಶ್, ದ್ವಿತೀಯ–ಜೀವಾ ಪುರುಷೋತ್ತಮ, ತೃತೀಯ–ಜಯಲಕ್ಷ್ಮೀ ರಾಜ್‌ಕುಮಾರ್

**ಬಾಲ್ ಇನ್ ಬಕೆಟ್ :** (ಮಹಿಳೆಯರು) ಪ್ರಥಮ–ವನಿತಾ ಎಸ್., ದ್ವಿತೀಯ–ಜ್ಯೋತಿ ಕೆ., ತೃತೀಯ–ಜಯಲಕ್ಷ್ಮೀ ರಾಜ್‌ಕುಮಾರ್

**100ಮೀ. ಲಿಂಬೆ ಮತ್ತು ಚಮಚ :** ಮಹಿಳೆಯರು)

ಪ್ರಥಮ–ಕನಕಾ ಸಂತೋಷ್, ದ್ವಿತೀಯ–ಶಾಂತಾ ಶ್ರೀನಿವಾಸ, ತೃತೀಯ–ಶೋಭಾ ಗೌಡ

**100ಮೀ. ಲಿಂಬೆ ಮತ್ತು ಚಮಚ :** ಮಹಿಳೆಯರು)

ಪ್ರಥಮ–ಹೇಮಲತಾ ಪಿ.ಆರ್., ದ್ವಿತೀಯ–ಪ್ರಿಯದರ್ಶಿನಿ, ತೃತೀಯ–ಭಾರತಿ ತಿಮ್ಮಪ್ಪ

**ಶಾಟ್‌ಪುಟ್ :** (ಪುರುಷರು) ಪ್ರಥಮ–ನಾಗೇಶ್, ದ್ವಿತೀಯ–ರೋವಿನ್, ತೃತೀಯ–ವಿನಯ್

**100ಮೀ. ಓಟ :** (ಮಹಿಳೆಯರು) ಪ್ರಥಮ–ಏಕ್ತಾ ಮೂರ್ತಿ ದ್ವಿತೀಯ–ಕನಕಾ ಸಂತೋಷ್, ತೃತೀಯ–ಸಂಪದಾ ಲಬ್ಬೀ ಮತ್ತು ಶ್ರೀದೇವಿ

**ಶಾಟ್‌ಪುಟ್ :** (ಮಹಿಳೆಯರು) ಪ್ರಥಮ–ತ್ರಿಶಾಲ್ ಸನ್ಮಾನ್, ದ್ವಿತೀಯ–ಜಯಲಕ್ಷ್ಮೀ ರಾಜ್‌ಕುಮಾರ್, ತೃತೀಯ–ಹೇಮಲತಾ ಪಿ.ಆರ್.

**100ಮೀ. ಓಟ :** (ಮಹಿಳೆಯರು) ಪ್ರಥಮ–ಜಯಲಕ್ಷ್ಮೀ ರಾಜ್‌ಕುಮಾರ್, ದ್ವಿತೀಯ–ಅಶ್ವಿನಿ, ತೃತೀಯ–ನಳಿನಾ ಚರ್ಮಣ್ಣ

**ಶಾಟ್‌ಪುಟ್ :** (ಪುರುಷರು) ಪ್ರಥಮ–ಪುರುಷೋತ್ತಮ, ದ್ವಿತೀಯ–ಸನ್ಮಾನ್ ಗೌಡ, ತೃತೀಯ–ಸಂತೋಷ್ ಜೆ.

**100ಮೀ. ಲಿಂಬೆ ಮತ್ತು ಚಮಚ :** ಮಹಿಳೆಯರು)

ಪ್ರಥಮ–ಪವಿತ್ರ ಮಂಜುನಾಥ್, ದ್ವಿತೀಯ–ವನಿತಾ ಸುಧೀರ್

**200ಮೀ. ವೇಗನಡಿಗೆ :** (ಮಹಿಳೆಯರು) ಪ್ರಥಮ–ಜಯಲಕ್ಷ್ಮೀ ರಾಜ್‌ಕುಮಾರ್, ದ್ವಿತೀಯ–ಲೀಲಾ ದೇವರಾಜ್, ತೃತೀಯ–ಮಮತಾಶಿವರಾಮ್

**ಸೂಜಿದಾರ :** ಪ್ರಥಮ–ಲವ ಚರ್ಮಣ್ಣ, ದ್ವಿತೀಯ–ಸಂಗೀತ, ತೃತೀಯ–ತಿಮ್ಮಪ್ಪ

**ಸೂಜಿದಾರ :** ಪ್ರಥಮ–ಗಜಾನನ ಶರ್ಮ, ದ್ವಿತೀಯ–ಲಿಖಿತ್, ತೃತೀಯ–ಮನೀಶ್ ಪೂಜಾರಿ

**ರಿಲೆ 4x100 ಮೀ :** (ಪುರುಷರು) ಪ್ರಥಮ–ಧ್ರುವ್ ಕಾಮ್‌ಶೆಟ್ಟಿ ಮತ್ತು ತಂಡ, ದ್ವಿತೀಯ–ಜಿತೇಶ್ ಮತ್ತು ತಂಡ, ತೃತೀಯ–ಸಂತೋಷ್ ಮತ್ತು ತಂಡ

**ರಿಲೆ 4x100 ಮೀ :** (ಮಹಿಳೆಯರು) ಪ್ರಥಮ–ಚಂದನಾ ಗೌಡ ಮತ್ತು ತಂಡ, ದ್ವಿತೀಯ–ಚೈತನ್ಯ ಮತ್ತು ತಂಡ, ತೃತೀಯ–ಜಯಲಕ್ಷ್ಮೀ ರಾಜ್‌ಕುಮಾರ್ ಮತ್ತು ತಂಡ.

**200ಮೀ. ಓಟ :** (ಪುರುಷರು) ಪ್ರಥಮ–ಧ್ರುವ್ ಕಾಮ್‌ಶೆಟ್ಟಿ, ದ್ವಿತೀಯ–ನಾಗೇಶ್, ತೃತೀಯ–ಸನ್ಮಾನ್ ಗೌಡ

**200ಮೀ. ಓಟ :** (ಮಹಿಳೆಯರು) ಪ್ರಥಮ–ಚೈತನ್ಯ ಬಿ., ದ್ವಿತೀಯ–ಅನನ್ಯಾ ರಾಧಾಕೃಷ್ಣ, ತೃತೀಯ–ಪ್ರೇರಣಾ ರಾವ್

**100ಮೀ. ಮೂರು ಕಾಲಿನ ಓಟ :** (ಪುರುಷರು)

ಪ್ರಥಮ–ಸನ್ಮಾನ್ ಗೌಡ ಮತ್ತು ಧ್ರುವ್ ಕಾಮ್‌ಶೆಟ್ಟಿ, ದ್ವಿತೀಯ–ನಾಗೇಶ್ ಮತ್ತು















ಸಂತೋಷ್ ಕೆ.ಕೆ., ತೃತೀಯ–ಪೃಥ್ವೀ ಕಟ್ಟೀಮನಿ ಮತ್ತು ಸೂರಜ್ ತಿಮ್ಮಪ್ಪ

**100ಮೀ. ಮೂರು ಕಾಲಿನ ಓಟ :** ಮಹಿಳೆಯರು)

ಪ್ರಥಮ–ಆಶಾ ಮಹಾದೇವ್ ಮತ್ತು ಜಯಲಕ್ಷ್ಮೀ ರಾಜ್‌ಕುಮಾರ್, ದ್ವಿತೀಯ–ಸೌಮ್ಯ ಎನ್.ಎಂ. ಮತ್ತು ರಾಜಶ್ರೀ, ತೃತೀಯ–ಮಮತಾ ಶಿವರಾಮ್ ಮತ್ತು ಶಾಂತ ಶ್ರೀನಿವಾಸ

**ಕೇರಂ :** (ಪುರುಷರು) ಪ್ರಥಮ–ಚಂಗಾ ರೆಡ್ಡಿ, ದ್ವಿತೀಯ–ಪುರುಷೋತ್ತಮ

**ಕೇರಂ :** (ಮಹಿಳೆಯರು) ಪ್ರಥಮ–ಏಕ್ತಾ ಮೂರ್ತಿ, ದ್ವಿತೀಯ–ಮಮತಾ ಶಿವರಾಮ್

**ಕೇರಂ ಡಬಲ್ಸ್ :** ಪ್ರಥಮ–ಚಂಗಾ ರೆಡ್ಡಿ ಮತ್ತು ಡಾ. ಅಹಲ್ಯಾಚಿಂತಾಮಣಿ, ದ್ವಿತೀಯ–ಚಿದಂಬರ ಕೋಟೆ ಮತ್ತು ಮಮತಾ ಶಿವರಾಮ್

**ಚೆಸ್ :** ಪ್ರಥಮ–ಪಿ. ದಿನೇಶ್, ದ್ವಿತೀಯ–ಕುಮಾರ್‌ಲಬ್ಬೀ

**ಸ್ಮರಣ ಶಕ್ತಿ ಪರೀಕ್ಷೆ :** ಪ್ರಥಮ–ಚೈತನ್ಯ ಡಿ., ದ್ವಿತೀಯ–ಪ್ರಮೋದ್ ಕುಮಾರ್, ತೃತೀಯ–ಪೃಥ್ವೀರಾಜ್ ಕಟ್ಟೀಮನಿ

**ಚಿತ್ರ ಬರೆಯುವ ಸ್ಪರ್ಧೆ :** ಪ್ರಥಮ–ಶ್ರುತಿ ಪ್ರಭಾಕರ್, ದ್ವಿತೀಯ–ಸೂಕ್ಷ್ಮ ನಿಂಬಾಳ್, ತೃತೀಯ–ಲಕ್ಷ್ಯ ನಾಗರಾಜ್, ಸಮಾಧಾನಕರ ಬಹುಮಾನ–ಕೀರ್ತನಾ ಕಟ್ಟೀಮನಿ ಮತ್ತು ದಿವ್ಯಾ ಬಿರಾದಾರ.

**ಚಿತ್ರ ಬರೆಯುವ ಸ್ಪರ್ಧೆ :** ಪ್ರಥಮ–ಅನನ್ಯಾ ನಾಗರಾಜ, ದ್ವಿತೀಯ–ಪೃಥ್ವಿರಾಜ್ ಕಟ್ಟೀಮನಿ, ತೃತೀಯ–ತರುಣ್ ಕೃಷ್ಣಪ್ಪ, ಸಮಾಧಾನಕರ ಬಹುಮಾನ–ಪ್ರಮೋದ್ ಕುಮಾರ್ ಮತ್ತು ಶ್ರೀವಿದ್ಯಾ

**ಪಿಕ್ ಅಂಡ್ ಸ್ಪೀಕ್ :** ಪ್ರಥಮ–ಕುಶಾಲ್ ಎಂ., ದ್ವಿತೀಯ–ಶ್ರೇಯಾ ತೇಲಿ ಮತ್ತು ಶ್ರೇಷ್ಠಾ ತೇಲಿ, ತೃತೀಯ–ವಿಶ್ರುತ್ ಕೋಟೆ

**ಪಿಕ್ ಅಂಡ್ ಸ್ಪೀಕ್ :** ಪ್ರಥಮ–ಮಮತಾ ಶಿವರಾಮ್, ದ್ವಿತೀಯ–ಶಾಂತಕುಮಾರ್ ನಿಂಬಾಳ್, ತೃತೀಯ–ಲಕ್ಷ್ಮೀ ಕಿಣಿ

**ಭಕ್ತಿಗೀತೆ :** ಪ್ರಥಮ–ಅಭಿಷೇಕ್ ಎಸ್., ದ್ವಿತೀಯ–ಅಭಿಷೇಕ್ ಹುಬಾಳೆ, ತೃತೀಯ–ವಿಶ್ರುತ್ ಕೋಟೆ

**ಭಾವಗೀತೆ :** ಪ್ರಥಮ–ಅಭಿಷೇಕ್ ಹುಬಾಳೆ, ದ್ವಿತೀಯ–ಅಭಿಷೇಕ್ ಎಸ್., ತೃತೀಯ–ಶ್ರೇಯಾ ತೇಲಿ

**ಜಾನಪದ ಗೀತೆ :** ಪ್ರಥಮ–ಶ್ರೇಯಾ ತೇಲಿ, ದ್ವಿತೀಯ–ಕುಶಾಲ್ ಎಂ., ತೃತೀಯ–ಅಭಿಷೇಕ್ ಎಸ್.

**ಭಕ್ತಿಗೀತೆ :** ಪ್ರಥಮ–ಶ್ರುತಿ ಭಜಂತ್ರಿ, ದ್ವಿತೀಯ–ಮಮತಾ ಶಿವರಾಮ್, ತೃತೀಯ–ಮೇಘಾ ಕಿಣಿ.

**ಭಾವಗೀತೆ :** ಪ್ರಥಮ–ಚಿದಂಬರ ಕೋಟೆ, ದ್ವಿತೀಯ–ಶ್ರುತಿ ಭಜಂತ್ರಿ, ತೃತೀಯ–ಮೇಘಾ ಕಿಣಿ

ಜಾನಪದ ಗೀತೆ : ಪ್ರಥಮ–ಶ್ರುತಿ ಭಜಂತ್ರಿ, ದ್ವಿತೀಯ–ಮೇಘಾ ಕಿಣಿ, ತೃತೀಯ–ನೇತ್ರಾ ಕುಮಾರ್

**ಕ್ವಿಜ್ :** ಪ್ರಥಮ–ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ತಂಡ–ಎಸ್. ಕುಮಾರ್, ಸುಜಾತ ಮೂರ್ತಿ, ಶಕುಂತಲಾ ನಾಯಕ್, ನಯನ ಸತ್ಯನಾರಾಯಣ, ಜಯಾ ಶ್ರೀನಿವಾಸ, ದ್ವಿತೀಯ–ಡಾ. ಚಂದ್ರಶೇಖರ ಕಂಬಾರ ತಂಡ–ಡಾ. ಅಹಲ್ಯಾಚಿಂತಾಮಣಿ, ಏಕ್ತಾ ಮೂರ್ತಿ, ಜ್ಯೋತಿ ಶಂಭು, ಶಿವಪ್ಪ ಎಂ., ಲೀಲಾ ದೇವರಾಜ್, ತೃತೀಯ–ಶಿವರಾಮ ಕಾರಂತ ತಂಡ–ಜಮುನಾ ಸಿ. ಮಠದ, ಮಮತಾ ಶಿವರಾಮ್, ಎಂ.ಪಿ. ಪಾರ್ವತಿ, ದಿನೇಶ್ ಪಿ., ದೀಪಾ ಶಿವಪ್ಪ.

**ರಂಗೋಲಿ :** ಪ್ರಥಮ–ಮೈಥಿಲಿ ಅತ್ತಾವರ, ದ್ವಿತೀಯ–ಸುಜಾತ ನಾಯಕ್, ತೃತೀಯ–ಅಂಜನಾ ಕಟ್ಟೀಮನಿ. ಅ



# ದೆಹಲಿಯ ಕನ್ನಡ ರಂಗ ವೇದಿಕೆಯಲ್ಲಿ ಮತ್ತೆ ಬಿ.ವಿ. ಕಾರಂತರು

ಕನ್ನಡ ರಂಗಭೂಮಿಯ ಭೀಷ್ಮ ಪಿತಾಮಹಾ ಬಿ.ವಿ. ಕಾರಂತರ ಸತ್ತವರ ನೆರಳು ನಾಟಕದ ಪ್ರದರ್ಶನ ಮತ್ತು ಕಾರಂತರ ಜೀವನದ ಕುರಿತಾದ ಬಾಬಾ ಕಾರಂತದ ರಂಗ ಪ್ರಯೋಗವು ದೆಹಲಿ ಕರ್ನಾಟಕ ಸಂಘದ ರಂಗವೇದಿಕೆಯಲ್ಲಿ ಇದೇ ನವಂಬರ್ 3 ಮತ್ತು 4ರಂದು ನಡೆಯಿತು. ಬಿ.ವಿ. ಕಾರಂತರು ತನ್ನ ರಂಗಚಟುವಟಿಕೆಗಳಿಗಾಗಿ ದೆಹಲಿಯಲ್ಲಿ ಸ್ಥಾಪಿಸಿದ್ದ ಕನ್ನಡಭಾರತಿಯ ಕೊಂಡಿಯಾಗಿದ್ದ ಅಂತರಾಷ್ಟ್ರೀಯ ಖ್ಯಾತಿಯ ಚಿತ್ರ ಕಲಾವಿದ ಭೀಮರಾವ್ ಮುರಗೋಡ ಅವರು ಅಕ್ಟೋಬರ್ ಐದರಂದು ಬೆಂಗಳೂರಿನಲ್ಲಿ ನಿಧನರಾಗಿದ್ದು ಈ ಕಾರ್ಯಕ್ರಮವು ಅವರಿಗೆ ಸೂಕ್ತವಾಗಿ ಶ್ರದ್ಧಾಂಜಲಿಯನ್ನು ನೀಡಿತು. ಎಪ್ಪತ್ತರ ದಶಕದಲ್ಲಿ ಮುರುಗೋಡ ಅವರು ಕಾರಂತರ ಹಲವು ನಾಟಕಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ದೆಹಲಿಯ ಕನ್ನಡ ರಂಗಭೂಮಿಯ ಸುವರ್ಣ ಕಾಲದ ಗತವೈಭವದ ಒಂದು ತುಣುಕು ವರ್ತಮಾನದ ರಂಗರಸಿಕರಿಗೆ ದೊರಕಿತು.

ಜಡಭರತ ಅವರ ಸತ್ತವರ ನೆರಳು ನಾಟಕವನ್ನು ಬಿ.ವಿ. ಕಾರಂತರು ಒಂದು ವಿಭಿನ್ನ ಪ್ರಯೋಗವನ್ನಾಗಿ ರಂಗದಲ್ಲಿ ಅಳವಡಿಸಿದರು. ಜಡಭರತ ಕಾವ್ಯನಾಮದಲ್ಲಿ ಬರೆಯುತ್ತಿದ್ದ ಜಿ.ಬಿ. ಜೋಶಿ ಅವರ ಇನ್ನೊಂದು ನಾಟಕ ನಾನೇ ಬಿಜ್ಜಳವನ್ನು ಕೂಡಾ ಕಾರಂತರು ಕನ್ನಡಭಾರತಿಯ ಮೂಲಕ ನಿರ್ದೇಶಿಸಿದ್ದರು. ಜಡಭರತ ಅವರ ಈ ಎರಡು ನಾಟಕಗಳಿಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿಗಳು ದೊರಕಿವೆ. ಈ ನಾಟಕಗಳಲ್ಲದೇ ಕಾರಂತರು ಗೋಕುಲ ನಿರ್ಗಮನ, ಏವಂ ಇಂದ್ರಜಿತ್, ಹಯವದನ, ಜೋಕುಮಾರಸ್ವಾಮಿ, ಸಂಕ್ರಾಂತಿ ಮುಂತಾದ ನಾಟಕಗಳನ್ನು ದೆಹಲಿಯಲ್ಲಿ ಮಾಡಿಸಿದ್ದರು. ಅವರ ಗೋಕುಲ ನಿರ್ಗಮನ, ಸತ್ತವರ ನೆರಳು ನಾಟಕಗಳು ನಾಲ್ಕೈದು ದಶಕಗಳು ಕಳೆದರೂ ಇಂದಿಗೂ ಪ್ರಸ್ತುತವಾಗಿವೆ. ಕಾಲ ಬದಲಾದರೂ ಈ ನಾಟಕದ ವಸ್ತು ಸಮಕಾಲೀನ ಸಮಾಜವನ್ನು ಪ್ರತಿಬಿಂಬಿಸುತ್ತಾ ನಾಟಕವನ್ನು ಸಾರ್ವಕಾಲಿಕವಾಗಿಸುತ್ತದೆ. ರಂಗಪರಂಪರೆಗೆ ಹೊಸದೊಂದು ಆಯಾಮವನ್ನು ನೀಡಿರುವ ಈ ನಾಟಕಗಳು ಪ್ರೇಕ್ಷಕರನ್ನು ಮತ್ತೆ ಮತ್ತೆ ಸೆಳೆಯುತ್ತವೆ. ಎಪ್ಪತ್ತರ ದಶಕದಿಂದ ಕನ್ನಡ ಹವ್ಯಾಸಿ ರಂಗಭೂಮಿಗೆ ಅನೇಕ ಅಪರೂಪದ ಪ್ರಯೋಗಗಳನ್ನು ನೀಡಿದವರು ಬಿ.ವಿ. ಕಾರಂತರು.

ಧಾರ್ಮಿಕ ಮಠಗಳಲ್ಲಿ ನಡೆಯುತ್ತಿರುವ ಅಂಧಶ್ರದ್ಧೆಯ ಆಚರಣೆಗಳಿಗೆ ಪ್ರೋತ್ಸಾಹ, ಅಧಿಕಾರಕ್ಕಾಗಿ ನಡೆಯುವ ಕುತಂತ್ರಗಳು, ಪ್ರಗತಿಪರ ವಿಚಾರಗಳಿಗೆ ಆಸ್ಪದ ನೀಡದಂತಹ ಪರಿಸ್ಥಿತಿಯನ್ನು ನಿರ್ಮಿಸುವುದು ಮುಂತಾದ ನಾಟಕೀಯ ಅಂಶಗಳನ್ನು ಹೊಂದಿರುವ ಗಂಭೀರ ನಾಟಕದಲ್ಲಿ ಬರುವ ದ್ವಂದ್ವ, ವ್ಯಂಗ್ಯ,



ವಿಡಂಬನೆಗಳನ್ನು ಪುರಂದರ ದಾಸರ ಹಾಡುಗಳ ಹೊಸದೊಂದು ಧಾಟಿಯ ಮೂಲಕ ಸತ್ತವರ ನೆರಳು ರಂಗದ ಮೇಲೆ ಬೆಳೆಯುತ್ತದೆ. ಪುರಂದರ ದಾಸರ ಪದಗಳು ನಾಟಕದ ಉದ್ದಕ್ಕೂ ಪಾತ್ರಗಳ ಅಂತರ್ಯವನ್ನು ಪ್ರೇಕ್ಷಕರಿಗೆ ಕಟ್ಟಿಕೊಡುತ್ತವೆ. ಕಾರಂತರು ರಂಗ ಸಂಗೀತಕ್ಕೆ ಹೊಸದೊಂದು ವ್ಯಾಖ್ಯೆಯನ್ನು ಬರೆದವರು. ರಂಗಗೀತೆಯು ನಾಟಕದಲ್ಲಿ ಕೇವಲ ಮಾಧುರ್ಯವನ್ನು ನೀಡುವ





ಅಂಶವಾಗಿರದೇ ಅದು ನಾಟಕದ ಮಾತಾಗುವಂತೆ ಕಾರಂತರು ಮಾಡಿದ್ದಾರೆ. ಅವರಿಗೆ ರಂಗದಲ್ಲಿ ಎಲ್ಲವು ಸಂಗೀತವೇ. ಅವರ ನಾಟಕಗಳಲ್ಲಿ ಸಂಗೀತವು ನಾಟಕದಿಂದ ಬೇರೆಯಾಗಿ ಉಳಿಯದೇ ನಾಟಕದ ಭಾಗವೇ ಆಗುತ್ತದೆ. ಮತ್ತು ಅದು ಒಟ್ಟಾರೆ ರಂಗಕ್ರಿಯೆಯ ಮೂಲಕ ಹೊಸದೊಂದು ಅರ್ಥವನ್ನು ಕೊಡುತ್ತದೆ. ಸತ್ತವರ ನೆರಳು ನಾಟಕ ಲೌಕಿಕತೆ ಮತ್ತು ಪಾರಮಾರ್ಥಿಕತೆಯ ನಡುವೆ ನಡೆಯುವ ಸಂದಿಗ್ಧತೆಯನ್ನು ತೆರೆಯುತ್ತಾ ಹೋಗುತ್ತದೆ. ಮಠಾಧೀಶನಾಗಲು ಒಪ್ಪಿಗೆ ಇಲ್ಲದ ವ್ಯಕ್ತಿಯೊಬ್ಬನ ಅಂತರಂಗದ ಗೊಂದಲಗಳು ಮತ್ತು ಮಠದ ಅಧಿಕಾರಕ್ಕಾಗಿ ಹಪಹಪಿಸುವ ದಿವಾನರ ಕಪಟತೆಗಳನ್ನು ಸೂಕ್ಷ್ಮ ರೀತಿಯಲ್ಲಿ ತೆರೆದಿಡುತ್ತದೆ. ಸತ್ತವರ ನೆರಳು ನಾಟಕದಲ್ಲಿ ಸಂಗೀತವನ್ನು ವಿನೂತನ ರೀತಿಯಲ್ಲಿ ಕಾರಂತರು ಬಳಸಿದ್ದಾರೆ.

ವೈದೇಹಿ ಅವರು ಬರೆದ ಬಿ.ವಿ. ಕಾರಂತರ ಆತ್ಮಕಥೆ 'ಇಲ್ಲಿರಲಾರೆ ಅಲ್ಲಿ ಹೋಗಲಾರೆ' ಮತ್ತು ಪ್ರೇಮಾ ಕಾರಂತ್ ಅವರ 'ಸೋಲಿಸಬೇಡಯ್ಯ, ಗೆಲಿಸಯ್ಯ' ಆತ್ಮಕಥೆಯನ್ನು ಆಧರಿಸಿ ಬಾಬಾ ಕಾರಂತ ಎಂಬ ರಂಗಪ್ರಯೋಗವನ್ನು ಪ್ರದರ್ಶಿಸಲಾಯಿತು. ಟಿ. ಎಸ್. ನಾಗಾಭರಣ ಅವರು ನಿರ್ದೇಶಿಸಿದ ಈ ನಾಟಕವನ್ನು ಕೃಷ್ಣಪ್ರಸಾದ್ ಮತ್ತು ಶ್ರೀಪತಿ ಮಂಜನಬೈಲು ರಂಗಕ್ಕೆ ಅಳವಡಿಸಿದ್ದರು. ಬಿ.ವಿ. ಕಾರಂತರ ಬಾಲ್ಯ, ಅವರು ಗುಬ್ಬಿ ಕಂಪನಿಯಲ್ಲಿ ಸೇರಿದ ಅನುಭವ, ವಾರಾಣಾಸಿ, ದೆಹಲಿಯ ವಾಸ ಮತ್ತು ರಂಗಭೂಮಿಯಲ್ಲಿ ನಡೆಸಿದ ಕೆಲಸಗಳು, ಭೋಪಾಲದ ರಂಗಮಂಡಲ, ಮೈಸೂರಿನ ರಂಗಾಯಣ ... ಹೀಗೆ ಕಾರಂತರ ಬದುಕಿನ ಪಯಣವನ್ನು ಈ ಪ್ರಯೋಗದಲ್ಲಿ ಕಟ್ಟಿಕೊಡಲಾಯಿತು. 1969ರಿಂದ ಬಿ.ವಿ. ಕಾರಂತರ ಜತೆ ರಂಗಭೂಮಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದ ನಾಗಾಭರಣರು ಅವರ ಜತೆ 1970ರಲ್ಲಿ ಬೆನಕ ತಂಡವನ್ನು ಕಟ್ಟಿದರು. ಕಾರಂತರ ಜತೆ ಅವರ ಒಡನಾಟ ಬಹಳ ಸುದೀರ್ಘವಾದುದು. ಕಾರಂತರ ನಂತರ ಬೆನಕ ಸಂಸ್ಥೆಯನ್ನು ಸಮರ್ಥವಾಗಿ ನಾಗಾಭರಣ ಅವರು ಮುಂದುವರಿಸಿಕೊಂಡು ಬಂದಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಹಿರಿಯ ನಟ ಮತ್ತು ನಿರ್ದೇಶಕರಾಗಿರುವ ನಾಗಾಭರಣ ಅವರು ಸಿನಿಮಾರಂಗ ಮತ್ತು ಕನ್ನಡ ರಂಗಭೂಮಿಗೆ ಅಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘದ ಜತೆ ಅನ್ಯೋನ್ಯ ಸಂಬಂಧವನ್ನು ಬೆಳೆಸಿರುವ ನಾಗಾಭರಣ ಅವರು ಇಲ್ಲಿನ ರಂಗ ಪ್ರೇಕ್ಷಕರಿಗಾಗಿ ಈ ಎರಡು ನಾಟಕಗಳನ್ನು ಪ್ರದರ್ಶಿಸಿ ಕಾರಂತರಿಗೆ ಸಮರ್ಪಿಸಿದ್ದಾರೆ. ಅ

***ಬಾಲಕೃಷ್ಣ ನಾಯ್ಕ್ ಡಿ.***



# ಸಂಬಂಧಗಳ ಎಳೆಗಳನ್ನು ನೇಯ್ದ ಕನ್ನಡ ನಾಟಕ ಸಂದೇಹ ಸಾಮ್ರಾಜ್ಯ ಸಂಘದಲ್ಲಿ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಅಕ್ಟೋಬರ್ 27ರಂದು ಕೆ.ವಿ. ಸುಬ್ಬಣ್ಣ ರಂಗಸಮೂಹ, ಹೆಗ್ಗೋಡು ತಂಡದಿಂದ 'ಸಂದೇಹ ಸಾಮ್ರಾಜ್ಯ' ನಾಟಕ ಪ್ರದರ್ಶನ ನಡೆಯಿತು. ಮಂಜುನಾಥ ಎಲ್. ಬಡಿಗೇರ ಅವರ ನಿರ್ದೇಶನದಲ್ಲಿ ಸವಣೂರು ವಾಮನರಾಯರ 'ಸಂದೇಹ ಸಾಮ್ರಾಜ್ಯ' ನಾಟಕ ಪ್ರದರ್ಶನಗೊಂಡಿತು. ಮನುಷ್ಯ ಸಂಬಂಧಗಳಲ್ಲಿ ಅತಿ ಸಂಕೀರ್ಣವಾದ ಸಂಬಂಧವೆಂದರೆ ಗಂಡು–ಹೆಣ್ಣು ಅಥವಾ ಗಂಡ–ಹೆಂಡತಿಯ ಸಂಬಂಧ. ಈ ಸಂಬಂಧ ಉಳಿದೆಲ್ಲಾ ಸಂಬಂಧಗಳಿಗಿಂತ ಬಹುಬೇಗ ನಾಶವಾಗಲೂಬಹುದು ಅಥವಾ ಚಿರಸ್ಥಾಯಿಯಾಗಿ ಉಳಿಯಬಹುದು. ಆದರೆ ಅದು ನಂಬಿಕೆಯನ್ನು ಅವಲಂಭಿಸಿರುತ್ತದೆ. ಈ ಮನುಷ್ಯ ಸಂಬಂಧಗಳು ಸಹ ಮಾರುಕಟ್ಟೆಯ ಸರಕಾಗಿರುವ ಈ ಸಂದರ್ಭದಲ್ಲಿ ಈ ನಾಟಕ ಪ್ರಯೋಗ ಪ್ರಸುತವೆನಿಸುತ್ತದೆ. ನಮ್ಮ ಕವಿಗಳು, ಸಂತರು, ದಾರ್ಶನಿಕರು, ಗಂಡು–ಹೆಣ್ಣಿನ ಸಂಬಂಧವನ್ನು ದೈವಿಕ ನೆಲೆಗೆ ಒಯ್ದು ಹಾಡಿ ಹೊಗಳಿದ್ದಾರೆ. ಈ ಹಿನ್ನಲೆಯಲ್ಲಿ ಮನುಷ್ಯನ 'ಕುಟುಂಬ' ಎಂಬ ಪರಿಕಲ್ಪನೆಗೆ ಆದರ್ಶದ ಚೌಕಟ್ಟು ದೊರೆತಿದೆ. ಆದರೆ ಇಂದು ಸಮಾನತೆ, ಸ್ವಾತಂತ್ರ್ಯ, ಸ್ತ್ರೀವಾದ ಇಂತಹ ಹಲವಾರು ಪ್ರಗತಿಪರ ಚಿಂತನೆಗಳು ತಮ್ಮ ತತ್ವಗಳನ್ನು ಕಳೆದುಕೊಂಡು ಕೇವಲ ಶಬ್ದಾರ್ಥವಾಗಿ ಕುಟುಂಬ ಎಂಬ ಆದರ್ಶದ ಚೌಕಟ್ಟನ್ನು ಒಡೆದು ಹಾಕುತ್ತಿವೆ.

ಕೆ.ವಿ. ಸುಬ್ಬಣ್ಣ ರಂಗಸಮೂಹವು ಕೆ.ವಿ. ಸುಬ್ಬಣ್ಣನವರ ಮಾರ್ಗದರ್ಶನ ಹಾಗೂ ನೀನಾಸಮ್ ಸಂಸ್ಥೆಯ ಮೂಲಕ ರಂಗ ಸಂಸ್ಕಾರಗೊಂಡು ಆರಂಭಗೊಂಡ ಸಂಘಟನೆಯಾಗಿದ್ದು ಕಳೆದ ಮೂರ್ನಾಲ್ಕು ವರ್ಷಗಳಿಂದ ರಂಗಭೂಮಿ ಕೆಲಸಗಳನ್ನು ಮಾಡುತ್ತಾ ಬಂದಿದೆ. ಈಗಾಗಲೇ ಈ ಹವ್ಯಾಸಿ ನಾಟಕ ತಂಡ, ಸಂಗ್ಯಾ ಬಾಳ್ಯಾ ನಾಟಕದ ಇಪ್ಪತ್ತೈದು ಪ್ರದರ್ಶನಗಳನ್ನು ಕರ್ನಾಟಕದ ಬೇರೆ ಬೇರೆ ಊರುಗಳಲ್ಲಿ ನೀಡಿ ಶಿಸ್ತುಬದ್ಧ ರಂಗ ಪ್ರಯೋಗದ ಬದ್ಧತೆ ಕಂಡುಕೊಂಡಿದೆ. ಉಪಸ್ಥಿತರಿದ್ದ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀ ಸರವು ಕೃಷ್ಣ ಭಟ್ ಅವರು ಕಲಾವಿದರನ್ನು ಅಭಿನಂದಿಸಿದರು. ಅ

***ಅಭಿಮತ ವರದಿ***



# ನವದೆಹಲಿಯ ಕರ್ನಾಟಕ ಭವನದಿಂದ ೬೩ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ

ನಿವಾಸಿ ಆಯುಕ್ತರ ಕಚೇರಿ ಕರ್ನಾಟಕ ಭವನ, ನವದೆಹಲಿ ಇವರು ಹಮ್ಮಿಕೊಂಡಿದ್ದ 63ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ಸಲವೂ ಅದ್ದೂರಿಯಾಗಿ ಆಚರಿಸಲಾಯಿತು.

63ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ ಅಂಗವಾಗಿ ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನದಲ್ಲಿ ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಸಯ್ಯದ್ ಮೊಹಿದ್ ಅಲ್ತಾಫ್ ಅವರು ಧ್ವಜಾರೋಹಣ ಮಾಡಿ, ಭುವನೇಶ್ವರಿ ದೇವಿಯ ಪೂಜೆ ಮಾಡುವ ಮೂಲಕ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಸಂದರ್ಭ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ನಿವಾಸಿ ಆಯುಕ್ತರಾದ ಶ್ರೀ ನಿಲಯ ಮಿತಾಶ್ ಹಾಗೂ ಕರ್ನಾಟಕ ಭವನದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಂಗವಾಗಿ ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. 40ಕ್ಕೂ ಹೆಚ್ಚು ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಹಾಗೂ ಪತ್ರಕರ್ತರು ರಕ್ತದಾನ ಮಾಡಿದರು. ಇದೇ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಉಚಿತ ನೇತ್ರ ತಪಾಸಣಾ ಶಿಬಿರದ ಪ್ರಯೋಜನವನ್ನು ಸಹ ಸಿಬ್ಬಂದಿಯವರು ಪಡೆದುಕೊಂಡರು. ಕರ್ನಾಟಕ ಭವನದ ವೈದ್ಯಾಧಿಕಾರಿ ಡಾ. ಕಾರ್ತಿಕ್ ಅವರ ನೇತೃತ್ವದಲ್ಲಿ ರಕ್ತದಾನ ಹಾಗೂ ಉಚಿತ ನೇತ್ರ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯಿತು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಸಯ್ಯದ್ ಮೊಹಿದ್ ಅಲ್ತಾಫ್ ಅವರು ಕಾರ್ಯಕ್ರಮದ ವಿಶೇಷ ಅತಿಥಿಗಳಾಗಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ನಿವಾಸಿ ಆಯುಕ್ತರಾದ ನಿಲಯ ಮಿತಾಶ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಿವಾಸಿ ಆಯುಕ್ತರಾದ ನಿಲಯ ಮಿತಾಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ದೆಹಲಿ ಕರ್ನಾಟಕ ಭವನದ ಸಿಬ್ಬಂದಿ ಮತ್ತು ಕುಟುಂಬದವರು ಕರ್ನಾಟಕ ರಾಜ್ಯೋತ್ಸವನ್ನು ಹೆಚ್ಚು ಉಸ್ತುಕತೆಯಿಂದ ಆಚರಿಸುತ್ತಿರುವುದು ಕನ್ನಡ ನಾಡು ನುಡಿ, ಸಂಸ್ಕೃತಿಯನ್ನು ದೆಹಲಿಯಂತ ಮಹಾನಗರದಲ್ಲಿ ಕನ್ನಡ ನಾಡಿಗೆ ಕೀರ್ತಿಯನ್ನು ಹೆಚ್ಚಿಸುವಂತಾದಾಗಿರುತ್ತದೆ ಎಂದು ದೆಹಲಿಯ ಎಲ್ಲಾ ಕನ್ನಡಿಗರನ್ನು ಸ್ವಾಗತಿಸಿದರು.

ಕರ್ನಾಟಕದಿಂದ ಬಹಳ ದೂರವಿದ್ದರೂ ಕನ್ನಡ ಭಾಷೆ ಅಲ್ಲಿ ಎಲ್ಲರನ್ನೂ ಒಂದುಗೂಡಿಸಿತ್ತು. ಕರ್ನಾಟಕ ಭವನದ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ಮಕ್ಕಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕರ್ನಾಟಕದ ಇತಿಹಾಸ, ಪರಂಪರೆ, ಸಾಹಿತ್ಯ ಹಾಗೂ ಕಲೆ ಹಾಗೂ ಜಾನಪದ ವೈವಿಧ್ಯ ಕುರಿತಾಗಿ ವಿವಿಧ ಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮ ಜನ ಮನ ಸೂರೆಗೊಂಡವು. ಸಾಂಸ್ಕೃತಿಕ ಕಾರ್ಯಕ್ರಮದ ರೂವಾರಿಯನ್ನು ಶ್ರೀ ಬಿ.ವಿ. ವಿಠ್ಠಲ್, ಸಮನ್ವಯಾಧಿಕಾರಿಗಳು, ಸಂಸದರ ಕೋಶ, ಕರ್ನಾಟಕ ಭವನ ಮತ್ತು ಶ್ರೀ ಜಯರಾಜ್, ಕರ್ನಾಟಕ ಉದ್ಯೋಗ ಮಿತ್ರ, ನವದೆಹಲಿ ಇವರು ವಹಿಸಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.


ಈ ಕಾರ್ಯಕ್ರಮಕ್ಕೆ ಶ್ರೀ ಆರ್. ರೇಣುಕುಮಾರ್ ಅವರು ರಚಿಸಿ ರಂಗಕ್ಕೆ ಅಳವಡಿಸಿದ ಕಿರು ನಾಟಕ 'ಜೀವನ' ಈ ಕಿರು ನಾಟಕವು ಜೀವನವನ್ನು ಹೇಗೆ ಇರುವುದರಲ್ಲಿ ಸುಖಿಸಬಹುದು ಎಂಬ ಅರಿವನ್ನು ಮೂಡಿಸು ಪ್ರಯತ್ನ ಮಾಡಿದರು. ಈ ಕಿರುನಾಟಕದಲ್ಲಿ ಕರ್ನಾಟಕ ಭವನದ ಸಿಬ್ಬಂದಿ ವರ್ಗದವರಾದ ಶ್ರೀ ಎಸ್. ಕುಮಾರ್, ಶ್ರೀಮತಿ ಶುಭಕುಮಾರಿ, ಶ್ರೀಮತಿ ಲಕ್ಷ್ಮೀಹಾರೋಬೆಳವಾಡಿ, ಶ್ರೀ ಅಶೋಕ್ ಕುಂಬಾರ್, ಶ್ರೀ ಜಗದೀಶ್, ಶ್ರೀ ಮೋಹನ್ ಕುಮಾರ್, ಶ್ರೀ ನಾರಾಯಣ ಮತ್ತು ಕುಮಾರಿ, ಕೆ.ಎನ್. ಜಯಶ್ರೀ, ಎಸ್. ಕುಮಾರ್ ಉತ್ತಮವಾಗಿ ನಟಿಸಿ ಎಲ್ಲರ ಪ್ರಶಂಸೆಗೆ ಪಾತ್ರವಾಗಿದ್ದಾರೆ.

ಈ ಕಾರ್ಯಕ್ರಮದಲ್ಲಿ ಉಪನಿವಾಸಿ ಆಯುಕ್ತರಾದ ಶ್ರೀಮತಿ ಮೋನಿಕಾ ಕಷ್ಟರಿ, ಸಹಾಯಕ ನಿವಾಸಿ ಆಯುಕ್ತರಾದ ಶೈಲೇಂದ್ರ ಸಿಂಗ್, ಸಮನ್ವಯಾಧಿಕಾರಿ, ಸಂಸದರ ಕೋಶ ಬಿ.ವಿ. ವಿಠ್ಠಲ್, ವಾರ್ತಾಧಿಕಾರಿ ಗಿರೀಶ್ ಎಲ್.ಪಿ., ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತಿತರರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***





# ಕರ್ನಾಟಕ ಪರಿಕಲ್ಪನೆ-ಕುರಿತು ಜೆ.ಎನ್.ಯು.ವಿನಲ್ಲಿ ವಿಚಾರ ಸಂಕಿರಣ

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಇದೇ ನವೆಂಬರ್ 27ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ಕನ್ನಡ ಅಧ್ಯಯನ ಪೀಠ ಜೆ.ಎನ್.ಯು.ವಿನಲ್ಲಿ "ಕರ್ನಾಟಕದ ಪರಿಕಲ್ಪನೆ" ಕುರಿತಂತೆ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮವನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮಕ್ಕಳು ನಾಡಗೀತೆಯನ್ನು ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಭಾರತೀಯ ಭಾಷೆಗಳ ಕೇಂದ್ರದ ಮುಖ್ಯಸ್ಥರಾದ ಪ್ರೊ. ಗೋಬಿಂದ್ ಪ್ರಸಾದ್ ಕನ್ನಡ ಅಧ್ಯಯನ ಪೀಠ ಪ್ರಕಟಿಸಿದ 'ಅಮಿರ್‌ಬಾಯಿ ಕರ್ನಾಟಕಿ' (ಇಂಗ್ಲೀಷ್ ಆವೃತ್ತಿ) ಪುಸ್ತಕ ಬಿಡುಗಡೆ ಮಾಡಿ ಆದಷ್ಟೂ ಬೇಗ ಅಮಿರ್ ಬಾಯಿ ಕುರಿತ ಈ ಕೃತಿ ಹಿಂದಿಗೆ ಬರಲಿ ಎಂದು ಆಶಿಸಿ, ಕನ್ನಡ ಅಧ್ಯಯನ ಪೀಠದ ಚಟುಚಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ. ಸತೀಶ್ ದೇಶಪಾಂಡೆ ನಮ್ಮಲ್ಲಿ ಯಾಕೋ ಒಳ್ಳೆಯ ಸಮಾಜ ವಿಜ್ಞಾನಿಗಳು ಬರುತ್ತಿಲ್ಲ, ಇರುವ ಕೆಲವರು ಕೂಡ ಸಮಾಜದ ನೈಜ ಸಮಸ್ಯೆಗಳ ಕುರಿತು ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದ ಅವರು, ಹಠಮಾರಿತನದ ರಾಷ್ಟ್ರೀಯತೆ ಹಾಗೂ ಭಾಷಿಕ ರಾಷ್ಟ್ರೀಯತೆಗಳ ಎಚ್ಚರದಿಂದ ಇರಬೇಕಾಗಿದೆ ಎಂದರು.

ಕಾರ್ಯಕ್ರಮದ ಮತ್ತೊರ್ವ ಅತಿಥಿಯಾಗಿದ್ದ ಮತ್ತು 'ಪುನರ್ಚಿತ್' ಸಂಘಟನೆಯಲ್ಲಿ ಸಕ್ರಿಯವಾಗಿರುವ ಡಾ. ಎ.ಆರ್. ವಾಸವಿಯವರು, ಕರ್ನಾಟಕವನ್ನು ಬಾಧಿಸುತ್ತಿರುವ ನಿರುದ್ಯೋಗ, ಆರ್ಥಿಕ ಬಿಕ್ಕಟ್ಟು ಮತ್ತು ಜವಳಿ ಕಾರ್ಮಿಕರ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿ, ಈ ಎಲ್ಲಾ ಸಮಸ್ಯೆಗಳ ನಿವಾರಣೆಗಾಗಿ ಯುವ ಸಮೂಹ ಒಗ್ಗೂಡಬೇಕಿರುವ ಅಗತ್ಯತೆಯನ್ನು ಹೇಳಿದರು.

ಡಾ. ಎಚ್.ಎಸ್. ಶಿವಪ್ರಕಾಶ್ ಅವರು ಮಾತನಾಡಿ ವಸಹಾತು ಪೂರ್ವ ಹಾಗೂ ವಸಾಹತೋತ್ತರ ಕರ್ನಾಟಕದ ಪರಿಕಲ್ಪನೆ ನಮ್ಮ ಅಧ್ಯಯನಗಳಲ್ಲಿ ಕಳಚಿ ಹೋಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಉಪಸ್ಥಿತರಿದ್ದರು ಹಾಗೂ ಹಿರಿಯ ಪತ್ರಕರ್ತರಾದ ಡಿ. ಉಮಾಪತಿಯವರು ಗೋಷ್ಟಿಯ ಅಧ್ಯಕ್ಷತೆ ವಹಿಸಿದ್ದರು.

ಎರಡನೇ ಗೋಷ್ಠಿ ಹಾಗೂ ಕಾರ್ಯಕ್ರಮದ ಕೇಂದ್ರ ಬಿಂದುವಾದ "ಕರ್ನಾಟಕದ ಪರಿಕಲ್ಪನೆ" ಕುರಿತ ವಿಚಾರ ಸಂಕಿರಣದಲ್ಲಿ ಕರ್ನಾಟಕದ ಅನನ್ಯತೆ ಹಾಗೂ ಭಿನ್ನತೆ ಏನು? ಕರ್ನಾಟಕವನ್ನು ರೂಪಿಸಿದ ಮುಲಭೂತ ಘಟಕಗಳಾವುವು? ಎಂಬ ಮೂಲಭೂತ ಪ್ರಶ್ನೆಗಳನ್ನಿಟ್ಟುಕೊಂಡು ವಿಚಾರ ಸಂಕಿರಣವನ್ನು ನಡೆಸಲಾಯಿತು. ಮುಖ್ಯವಾಗಿ ಕರ್ನಾಟಕವನ್ನು ರೂಪಿಸಿದ ಸಾಂಸ್ಕೃತಿಕ, ಸಾಹಿತ್ಯಿಕ, ನೈಸರ್ಗಿಕತೆ, ರಾಜಕೀಯ ಹಾಗೂ ಮಹಿಳಾ ಪರಿಕಲ್ಪನೆ ಕುರಿತಂತೆ ತಜ್ಞರಿಂದ ವಿಷಯ ಮಂಡಿಸಲಾಯಿತು.

'ಕರ್ನಾಟಕದ ಸಾಂಸ್ಕೃತಿಕ ಪರಿಕಲ್ಪನೆ' ಕುರಿತು ಮಾತನಾಡಿದ ಡಾ. ರಹಮತ್ ತರೀಕೆರೆ ಕರ್ನಾಟಕ ಅಥವಾ ಭಾರತ 'ಸಂಕರ' ಸಂಸ್ಕೃತಿಯುಳ್ಳದ್ದು ಶುದ್ಧೀಕರಣ ಎಂಬುದು ನಮ್ಮ ಸಂಸ್ಕೃತಿಯಲ್ಲ ಬಹುತ್ವ ನಮ್ಮ ಸಂಸ್ಕೃತಿ, ಶುದ್ಧೀಕೃತ ಸಂಸ್ಕೃತಿ ನಮ್ಮ ದೇಶದ ಬಹುತ್ವಕ್ಕೆ ವಿರುದ್ಧವಾದುದು. ಸಂಕರ ಉಳಿದರೆ ನಮ್ಮ ಬಹುತ್ವವು ಉಳಿಯುತ್ತದೆ. ಅನೇಕ ಭಾಷೆ, ಜಾತಿ, ಜನಾಂಗಗಳ ನಡುವೆ ಸಂಕರವೇರ್ಪಡಬೇಕು ಅದು ನಮ್ಮ ದೇಶದ ಸೌಂದರ್ಯ ಎಂದರು. ಇದೇ ಸಂದರ್ಭದಲ್ಲಿ 'ದತ್ತ ಮತ್ತು ಬಾಬಾ' ಒಟ್ಟಿಗೆ ಇದ್ದ ಪರಂಪರೆ ನಮ್ಮದು ಈಗ ಶುದ್ಧೀಕರಿಸಲು ಹೊರಟಿರುವುದು ಅಪಾಯಕಾರಿ ಎಂದರು.

'ಕರ್ನಾಟಕದ ಸಾಹಿತ್ಯಿಕ ಪರಿಕಲ್ಪನೆ' ಕುರಿತು ಮಾತನಾಡಿದ ಡಾ. ನಟರಾಜ್ ಹುಳಿಯಾರ್ ಅವರು ಕರ್ನಾಟಕವನ್ನು ರೂಪಿಸುವಲ್ಲಿ ಕನ್ನಡ ಸಾಹಿತ್ಯ ಬಹುಮುಖ್ಯ ಕೆಲಸವನ್ನು ಮಾಡಿದೆ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು', 'ಹಚ್ಚೇವು ಕನ್ನಡದ ದೀಪ' ಎಂಬ ಕವಿತೆ ರಚಿಸುವ ಮೂಲಕ ಕನ್ನಡ ಸಾಹಿತ್ಯ ಕರ್ನಾಟಕದ ಏಕೀಕರಣಕ್ಕೆ ಮಹತ್ವದ ಕೊಡುಗೆ ನೀಡಿದೆ, ಭಾಷಿಕವಾಗಿ ಎಲ್ಲರನ್ನೂ ಒಗ್ಗೂಡಿಸುವ ಕೆಲಸ ಮಾಡಿದೆ ಎಂದು ಹೇಳಿದ ಅವರು ಜೊತೆಗೆ ಕರ್ನಾಟಕದ ಏಕೀಕರಣದ ಕೆಲಸಗಳು ಹೈದರಾಲಿಯಿಂದ ಆರಂಭವಾದವು ಎಂದು ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ಉಲ್ಲೇಖವಾಗಿದೆ ಎಂದರು.

'ಕರ್ನಾಟಕದ ನೈಸರ್ಗಿಕತೆ' ಕುರಿತು ಮಾತನಾಡಿದ ಡಾ. ನಾಗೇಶ ಹೆಗಡೆಯವರು ಪರಿಸರ ರಕ್ಷಣೆ ಇಂದು ಯಾರಿಗೂ ಮುಖ್ಯವಾಗಿಲ್ಲ, ಎಲ್ಲರಿಗೂ ನೀರು ಬೇಕು, ನೆರಳು ಬೇಕು ಆದರೆ ಮರಗಳನ್ನು ನೆಡುವುದರಲ್ಲಿ ಯಾರಿಗೂ ಆಸಕ್ತಿ ಇಲ್ಲ. ಸರ್ಕಾರಗಳು ಕೂಡ ನಿರ್ಲಕ್ಷ್ಯದ ಜೊತೆಗೆ ರಿಯಲ್ ಎಸ್ಟೇಟ್, ಗಣಿಗಾರಿಕೆ ಮಾಫಿಯಗಳಿಗೆ ಸೋತು ಶರಣಾದಂತಿದೆ ಎಂದು ಆತಂಕ ವ್ಯಕ್ತಪಡಿಸಿದರು.

'ಕರ್ನಾಟಕದ ರಾಜಕೀಯ ಪರಿಕಲ್ಪನೆ' ಕುರಿತು ಮಾತನಾಡಿದ ಡಾ. ಮುಜಾಫರ್ ಅಸಾದಿಯವರು ಚಿಕ್ಕದೇವರಾಜ್ ಒಡೆಯರ್ ಅವರಿಂದ ಕರ್ನಾಟಕ ರಾಜಕೀಯವಾಗಿ ರೂಪುಗೊಳ್ಳಲು ಆರಂಭವಾಗಿ ಹೈದಾರಾಲಿ ಹಾಗೂ ಟಿಪ್ಪು ಕಾಲ ಮತ್ತು ನಂತರದಲ್ಲಿ ವಿಶ್ವೇಶ್ವರಯ್ಯರವರಿಂದ ವಿಸ್ತರಣೆಗೊಂಡಿತು ಎಂದರು.

'ಕರ್ನಾಟಕದ ಮಹಿಳಾ ಪರಿಕಲ್ಪನೆ' ಕುರಿತು ಮಾತನಾಡಿದ ಡಾ. ವಿನಯಾ ಒಕ್ಕುಂದ ಅವರು "ಚರಿತ್ರೆಯಲ್ಲಿ ಮೂಲೆಗೆ ಸರಿದ ಹೆಣ್ಣನ್ನು ಮೇಲೆತ್ತಿ 'ಐಡಿಯಾ ಅಫ್ ಕರ್ನಾಟಕ'ವನ್ನು ಮರು ರೂಪಿಸಿಕೊಳ್ಳುವ ಅಗತ್ಯವಿದೆ ಎಂದರು. ಇದುವರೆಗೂ ಮಹಿಳೆಯರು ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ನೀಡಿದ ಕೊಡುಗೆಯನ್ನು ಮರೆಮಾಚಲಾಗಿದೆ ಇವರೆಲ್ಲರ ಚರಿತ್ರೆಯನ್ನು ಒಳಗೊಂಡ ಚರಿತ್ರೆಯ ಮರುಸೃಷ್ಟಿಯ ಅಗತ್ಯವಿದೆ ಎಂದರು. ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಮಹಿಳೆಯರು ತೋರಿದ ಧೈರ್ಯ ಸಾಹಸಗಳ ರೋಚಕ ಕಥೆಯೊಂದನ್ನು ಸ್ಮರಿಸಿಕೊಂಡರು.

ಈ ಕಾರ್ಯಕ್ರಮದ ಪ್ರಾಸ್ತಾವಿಕ ಮಾತುಗಳನ್ನಾಡಿದ ಡಾ. ಪುರುಷೋತ್ತಮ ಬಿಳಿಮಲೆಯವರು ಪ್ರಾದೇಶಿಕ ಭಾಷೆಗಳು ಎದುರಿಸುತ್ತಿರುವ ಅಪಾಯಗಳನ್ನು ಅಂಕಿಅಂಶಗಳ ಮುಖಾಂತರ ಬಿಚ್ಚಿಟ್ಟರಲ್ಲದೇ ಕನ್ನಡವನ್ನು ಕನ್ನಡೇತರರಿಗೆ ಪರಿಚಯಿಸುವ ಸಲುವಾಗಿ ಕನ್ನಡ ಅಧ್ಯಯನ ಕೈಗೊಂಡಿರುವ ಕನ್ನಡದ ಬಹುಮುಖ್ಯ ಕೃತಿಗಳ ಅನುವಾದ, ಕನ್ನಡ ಕಲಿಕೆಗಾಗಿ ಅಂತರ್ಜಾಲ, ಕನ್ನಡ ತರಗತಿಗಳು ಇತ್ಯಾದಿ ಯೋಜನೆಗಳನ್ನು ಹಂಚಿಕೊಂಡರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಸರವು ಕೃಷ್ಣಭಟ್‌ರು ಕಾರ್ಯಕ್ರಮವನ್ನು ನಿರೂಪಿಸಿದರು.

ಸಂಜೆಯ ನಂತರದಲ್ಲಿ ಕನ್ನಡ ಕಾವ್ಯಗಳಿಗೆ ಕಥಕ್ಕಳಿ ಹಾಗೂ ಭರತನಾಟ್ಯ ನೃತ್ಯವನ್ನು ಸಂಯೋಜಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶುಭಾ ಧನಂಜಯ ಹಾಗೂ ತಂಡದಿಂದ ನೀಡಲಾಯಿತು. ಅ

***ಕೃಷ್ಣಮೂರ್ತಿ, ಜೆ.ಎನ್.ಯು***





# ಶರಾವತಿ ಕನ್ನಡ ಸಂಘದಲ್ಲಿ ಕರ್ನಾಟಕ ರಾಜ್ಯೋತ್ಸವ

## ಭಾಷೆಯ ಬೆಳವಣಿಗೆಯಲ್ಲಿ ಉದ್ಯೋಗ ಸೃಷ್ಟಿ ಅನಿವಾರ್ಯ-ಸರವು ಕೃಷ್ಣ ಭಟ್

ಯಾವುದೇ ಭಾಷೆ ಬೆಳೆಯಬೇಕಾದರೆ ಅದು ಮೂರು ಹಂತಗಳಲ್ಲಿ ಬೆಳಯಬೇಕು. ಮೊದಲನೆಯದಾಗಿ ಬದುಕಿಗಾಗಿ ಭಾಷೆ. ಎರಡನೆಯದಾಗಿ ಸಾಹಿತ್ಯದ ಬೆಳವಣಿಗೆ. ಮೂರನೆಯದಾಗಿ ವಿಸ್ತರಣೆಗಾಗಿ ಭಾಷೆ. ಈ ಮೂರು ಹಂತಗಳಲ್ಲಿ ಬೆಳವಣಿಗೆಯಾದರೆ ಮಾತ್ರ, ಒಂದು ಭಾಷೆ ಸಮರ್ಥವಾಗಿ ಬೆಳೆಯುತ್ತದೆ ಎಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸರವು ಕೃಷ್ಣಭಟ್ ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಜೆ.ಎನ್.ಯು.ವಿನ ಶರಾವತಿ ಕನ್ನಡ ಸಂಘದಿಂದ ಇದೇ ನವೆಂಬರ್ 1ರಂದು ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕನ್ನಡವನ್ನು ಪ್ರಧಾನವಾಗಿ ಗಮನದಲ್ಲಿಟ್ಟುಕೊಂಡು ಮಾತನಾಡಿದ ಅವರು, ಕನ್ನಡ ಭಾಷೆ ಬೆಳೆಯಬೇಕಾದಲ್ಲಿ ಅದು ಬದುಕಿನ ಬಾಷೆ, ಅಥವಾ ಅನ್ನದ ಭಾಷೆ ಆಗಬೇಕು. ಅಂದರೆ ಕನ್ನಡದಲ್ಲಿ ಕಲಿತವರಿಗೆ ಹೆಚ್ಚೆಚ್ಚು ಉದ್ಯೋಗ ಸೃಷ್ಠಿಯಾಗುವಂತ ವಾತಾವರಣವಿರಬೇಕು ಆಗ ಬದುಕನ್ನು ಕಟ್ಟಿಕೊಳ್ಳುವ ಅನಿವಾರ್ಯದಲ್ಲಿ ಭಾಷೆ ಉಳಿಯುತ್ತದೆ. ಇದಕ್ಕೆ ಸರ್ಕಾರದ ನಿಯಮಗಳಲ್ಲಿ ಗುಣಾತ್ಮಕವಾದ ಬದಲಾವಣೆ ಬರಬೇಕು.

ಎರಡನೆಯದಾಗಿ ಕನ್ನಡ ಭಾಷೆಯಲ್ಲಿ ಹೆಚ್ಚಾಗಿ ಸಾಹಿತ್ಯ ರಚನೆಯಾಗಬೇಕು, ಇದಕ್ಕೆ ಸೃಜನಶೀಲ ವಾತಾವರಣ ನಿರ್ಮಾಣವಾಗಬೇಕು ಮತ್ತು ಮೂರನೆಯದಾಗಿ ಕನ್ನಡ ಭಾಷೆ ವಿಸ್ತರಣೆಯಾಗಬೇಕು, ಅಂದರೆ ಕನ್ನಡ ಭಾಷೆಯಲ್ಲಿ ರಚನೆಯಾದ ಸಾಹಿತ್ಯ ಬೇರೆ ಬೇರೆ ಭಾಷೆಗಳಲ್ಲಿ ಅನುವಾದವಾಗಬೇಕು. ಜೆ.ಎನ್.ಯುನ ಕನ್ನಡ ಅಧ್ಯಯನ ಪೀಠ ಈಗಾಗಲೇ ಈ ಕೆಲಸದಲ್ಲಿ ನಿರತವಾಗಿದೆ, ಈ ರೀತಿಯ ಕೆಲಸಗಳು ಬೇರೆ ಬೇರೆ ರಾಜ್ಯದ ಜನರು ಕನ್ನಡ ಮತ್ತು ಕರ್ನಾಟಕದ ಮೇಲೆ ಆಸಕ್ತಿ ಬೆಳಸಿಕೊಳ್ಳಲು ಮತ್ತು ಸಂಶೋಧನೆ ಕೈಗೊಳ್ಳಲು ಪ್ರೇರೇಪಿಸುತ್ತದೆ, ಎಂದು ಅವರು ವಿವರಿಸಿದರು.

ಮುಖ್ಯ ಅತಿಥಿಯಾಗಿ ಬಂದಿದ್ದ ಲೇಖಕಿ ಶ್ರೀಮತಿ ರೇಣುಕಾ ನಿಡುಗುಂದಿಯವರು ಶರಾವತಿ ಕನ್ನಡ ಸಂಘದ ಈ ರೀತಿಯ ಚಟುವಟಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮವನ್ನು ಆಶೋಕ್ ನಿರೂಪಿಸಿದರೆ, ಸುಂದರೇಶ್ ಅವರು ಸ್ವಾಗತಿಸಿದರು. ಜೆ.ಎನ್.ಯು.ವಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ವಿಶೇಷ ಉತ್ಸಾಹದಿಂದ ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಕವನ ವಾಚನ, ಹಾಡು ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಅ


***ಕೃಷ್ಣಮೂರ್ತಿ, ಜೆ.ಎನ್.ಯು***


# ಕರ್ನಾಟಕದ ಮಕ್ಕಳಿಂದ ಸಂಘದಲ್ಲಿ ಯೋಗ ಪ್ರದರ್ಶನ


ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವೆಂಬರ್ 23ರಂದು 43ನೇ ರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿದ ಕರ್ನಾಟಕದ ಮಕ್ಕಳಿಂದ ಯೋಗ ಪ್ರದರ್ಶನವನ್ನು ಹಮ್ಮಿಕೊಂಡಿತ್ತು. ಪಂಜಾಬಿನ ಪಟಿಯಾಲದಲ್ಲಿ ನವೆಂಬರ್ 18 ರಿಂದ 22, 2018ರವರೆಗೆ ನಡೆದ 43ನೇ ರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಕರ್ನಾಟಕದ 'ಅಮೆಚೂರ್ ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್'ನ 48 ಸ್ಪರ್ಧಿಗಳು ಭಾಗವಹಿಸಿದ್ದರು. ಇದರಲ್ಲಿ 12 ಯೋಗಪಟುಗಳು ಬಹುಮಾನವನ್ನು ಪಡೆದಿರುತ್ತಾರೆ. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ವಿದ್ಯಾರ್ಥಿಗಳನ್ನು ಸ್ವಾಗತಿಸಿ ಮೆಚ್ಚುಗೆಯ ಮಾತುಗಳನ್ನಾಡಿದರು. ಇನ್ನೂ ಹೆಚ್ಚಿನ ಪ್ರಯತ್ನಪಟ್ಟು ರಾಜ್ಯಕ್ಕೆ ದೇಶಕ್ಕೆ ಹೆಸರು ತರುವಂತಾಗಲಿ ಎಂದು ಶುಭ ಹಾರೈಸಿದರು. ಮಕ್ಕಳು ತಮ್ಮ ಯೋಗ ಅಲ್ಲದೆ ತಮ್ಮ ಇತರ ಚಟುವಟಿಕೆಗಳನ್ನು ಪ್ರದರ್ಶಿಸಿ ಪ್ರೇಕ್ಷಕರನ್ನು ಮನರಂಜಿಸಿದರು. ಸಂಘಧ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಧನ್ಯವಾದ ಸಲ್ಲಿಸಿದರು. ಅ

***ಅಭಿಮತ ವರದಿ***











# ರಾಣಿ ಅಬ್ಬಕ್ಕಳನ್ನು ಇತಿಹಾಸಕಾರರು ಮರೆತಿರುವುದು ವಿಷಾದನೀಯ- ಟಿ.ಎಸ್. ನಾಗಾಭರಣ

ರಾಣಿ ಅಬ್ಬಕ್ಕ ಅವರ ಬಗ್ಗೆ ದೆಹಲಿಯಲ್ಲಿ ಚಿತ್ರ ಕಲಾ ಸ್ಪರ್ಧೆ ಏರ್ಪಡಿಸಿರುವುದು ಅದ್ಭುತವಾದ ಕೆಲಸ ಮತ್ತು ಬೆಳವಣಿಗೆ. ರಾಜ್ಯದ ಕರಾವಳಿಯಲ್ಲಿ ರಾಣಿಯಾಗಿದ್ದ ಅಬ್ಬಕ್ಕರನ್ನು ರಾಷ್ಟ್ರ ರಾಜಧಾನಿಯಲ್ಲಿ ಪ್ರಚುರಪಡಿಸುವ ಈ ಪ್ರಯತ್ನ ಶ್ಲಾಘನೀಯ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಹೇಳಿದ್ದಾರೆ. ಅವರು ದೆಹಲಿ ಕರ್ನಾಟಕ ಸಂಘವು ದೆಹಲಿ ಹಾಗೂ ಸುತ್ತಮುತ್ತಲಿನ ಕನ್ನಡ ಮತ್ತು ಕನ್ನಡೇತರರ ಮಕ್ಕಳಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ದಕ್ಷಿಣ ಕನ್ನಡ ಜಿಲ್ಲಾಡಳಿತ, ಮತ್ತು ದೆಹಲಿ ಕನ್ನಡ ಶಾಲೆ ಜೊತೆಗೆ ಜಂಟಿಯಾಗಿ ದೆಹಲಿಯ ಕನ್ನಡ ವಿದ್ಯಾ ಸಂಸ್ಥೆಯಲ್ಲಿ ನವಂಬರ್ 5ರಂದು ಆಯೋಜಿಸಿದ್ದ ರಾಣಿ ಅಬ್ಬಕ್ಕ ಚಿತ್ರ ಕಲಾ ಸ್ಪರ್ಧೆಯ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ನಮ್ಮ ದೇಶದ ಒಟ್ಟು ಇತಿಹಾಸವನ್ನು ಗಮನಿಸಿದಾಗ ರಾಜ್ಯದ ಕರಾವಳಿ ಜಿಲ್ಲೆಗಳು, ಶಿವಮೊಗ್ಗದ ಮಲೆನಾಡಿನಲ್ಲಿ ಹೆಣ್ಣು ಹೃದಯಗಳು ಅದ್ಭುತವಾಗಿ ತಮ್ಮನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡಿರುವುದನ್ನು ನೋಡಿದ್ದೇವೆ. ಸ್ವಾತಂತ್ರ್ಯ ಎಂದರೆ ಸ್ವೇಚ್ಛೆಯಲ್ಲ ಎಂಬುದನ್ನು ಅರಿತುಕೊಂಡು ಸ್ತ್ರೀ ಒಬ್ಬಳು ಕತ್ತಿ ಹಿಡಿದು ತನ್ನನು ತಾನು, ತನ್ನ ಪರಿವಾರವನ್ನು, ತನ್ನ ಭಾಷೆಯನ್ನು, ತನ್ನ ರಾಜ್ಯವನ್ನು ಉಳಿಸಿಕೊಳ್ಳುತ್ತಾಳೆ ಎಂಬುದನ್ನು ಸಾಧಿಸಿ ತೋರಿಸಿದ ಕೆಲವೇ ಕೆಲವು ಮಹಾರಾಣಿಗಳಲ್ಲಿ ರಾಣಿ ಅಬ್ಬಕ್ಕ ಒಬ್ಬರು. ರಾಣಿ ಅಬ್ಬಕ್ಕ ರಾಜ್ಯವನ್ನು ನಿಭಾಯಿಸಿದ್ದು, ಸ್ವಾತಂತ್ರ್ಯದ ಆಶಯವನ್ನು ಬಿತ್ತರಿಸಿದ ರೀತಿ ಅತಿ ಮುಖ್ಯ ಎಂದು ನಾಗಾಭರಣ ಅಭಿಪ್ರಾಯ ಪಟ್ಟರು.

ರಾಣಿ ಅಬ್ಬಕ್ಕನನ್ನು ನಮ್ಮ ಇತಿಹಾಸಕಾರರು ಮರೆತಿರುವುದು ಹಾಗೂ ಪಠ್ಯಪುಸ್ತಕಗಳಲ್ಲಿ ಸ್ಥಾನ ಪಡೆಯದಿರುವುದು ವಿಷಾದನೀಯ, ಈ ಇತಿಮಿತಿಗಳ ನಡುವೆಯೂ ರಾಣಿ ಅಬ್ಬಕ್ಕರನ್ನು ಇಡೀ ದೇಶಕ್ಕೆ ಪರಿಚಯಿಸುವ ದೆಹಲಿ ಕರ್ನಾಟಕ ಸಂಘದ ಈ ಪ್ರಯತ್ನ ಶ್ಲಾಘನೀಯ ಎಂದು ಹೇಳಿದರು. ಚಿತ್ರಕೃತಿಗಳು ಮನಸ್ಸಿನ ಭಿತ್ತಿಯಲ್ಲಿ ಅಚ್ಚಳಿಯದೇ ಉಳಿಯುತ್ತದೆ. ನಮ್ಮದಲ್ಲದ್ದು ನಮ್ಮದೂ ಎಂಬ ಹೆಮ್ಮೆ, ಅಭಿಮಾನವನ್ನು ಸೃಷ್ಟಿಸುವ ಕೆಲಸವಿದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ, ರಾಣಿ ಅಬ್ಬಕ್ಕ ಅವರ ಬಗ್ಗೆ ಕೆಲವು ತಿಂಗಳುಗಳ ಹಿಂದೆ ದೆಹಲಿಯಲ್ಲಿ ವಿವಿಧ ಭಾಷೆಗಳಲ್ಲಿ ರಾಣಿ ಅಬ್ಬಕ್ಕ ಅವರ ಬಗೆಗಿನ ಉಪನ್ಯಾಸ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೆವು. ಅದರ ಮುಂದುವರಿದ ಭಾಗವಾಗಿ ಈಗ ದೆಹಲಿಯ ಶಾಲಾ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಿದ್ದೇವೆ. ರಾಣಿ ಅಬ್ಬಕ್ಕರನ್ನು ದೇಶದ ವಿವಿಧ ಭಾಗಗಳ ಮಕ್ಕಳಿಗೆ ಪರಿಚಯ ಮಾಡಿಕೊಡುವುದೇ ಈ ಕಾರ್ಯಕ್ರಮದ ಉದ್ದೇಶ. ಮಕ್ಕಳು ರಾಣಿ ಅಬ್ಬಕ್ಕ ಅವರನ್ನು ತಮ್ಮ ಕಲ್ಪನೆಯ ನೆಲೆಯಲ್ಲಿ ಚಿತ್ರಿಸಿದ್ದಾರೆ. ದೇಶದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕ ಅವರಿಗೆ ಚರಿತ್ರೆಯ ಪಠ್ಯಗಳಲ್ಲಿ ಅನ್ಯಾಯವಾಗಿದ್ದರೂ ಕೂಡ ಕನ್ನಡೇತರ ಮಕ್ಕಳಿಗೆ ಅವರನ್ನು ಪರಿಚಯಿಸುವ ಗುರಿಯೊಂದಿಗೆ ಕಾರ್ಯಕ್ರಮ ರೂಪಿಸಿದ್ದೇವೆ ಎಂದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀ ಸರವು ಕೃಷ್ಣ ಭಟ್, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಖಜಾಂಜಿ ಶ್ರೀ ಕೆ.ಎಸ್.ಜಿ. ಶೆಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಂತರರಾಷ್ಟ್ರೀಯ ಚಿತ್ರ ಕಲಾವಿದರಾದ ಮಂಜುನಾಥ್ ಕಾಮತ್, ಅರುಣ್ ಕುಮಾರ್ ಎಚ್.ಜಿ ತೀರ್ಪುಗಾರರಾಗಿ ಭಾಗವಹಿಸಿದರು. ದೆಹಲಿ ಕನ್ನಡ ಶಾಲೆಯ ಶಿಕ್ಷಕಿ ಶ್ರೀಮತಿ ಜ್ಯೋತಿ ಪೊದ್ದಾರ್ ಹಾಗೂ ಚಿತ್ರಕಲಾವಿದ ಚೆನ್ನು ಎಸ್. ಮಠದ ಸಂಚಾಲಕರಾಗಿ ಸಹಕರಿಸಿದ್ದರು. ದೆಹಲಿಯ ವಿವಿಧ ಶಾಲಾ ಕಾಲೇಜುಗಳಿಂದ ಆಗಮಿಸಿದ ಸುಮಾರು 100 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದರು. ಅ

**ಅಭಿಮತ ವರದಿ**







## ಬಹುಮಾನ ವಿಜೇತರು

ವಿಜೇತರಿಗೆ ಪ್ರಥಮ ನಗದು ಬಹುಮಾನ ಐದು ಸಾವಿರ ರೂಪಾಯಿ, ದ್ವಿತೀಯ ನಗದು ಬಹುಮಾನ ಮೂರು ಸಾವಿರ ರೂಪಾಯಿ, ತೃತೀಯ ನಗದು ಬಹುಮಾನ ಎರಡು ಸಾವಿರ ರೂಪಾಯಿ ಘೋಷಿಸಲಾಗಿದೆ.

8ನೇ ತರಗತಿ ವಿಭಾಗದಲ್ಲಿ ಆಂಧ್ರ ಶಾಲೆಯ ಅನುಷ್ಕಾ–ಪ್ರಥಮ, ದೆಹಲಿ ಕನ್ನಡ ಶಾಲೆಯ ಆರುಷಿ–ದ್ವಿತೀಯ, ತೃತೀಯ ಬಹುಮಾನ ಪ್ರಿಯಾ ಕುಮಾರಿ, ದೆಹಲಿ ಕನ್ನಡ ಶಾಲೆ ಮತ್ತು ಸೌಮ್ಯಶ್ರೀ, ಎಸ್.ಎನ್. ಸಿದ್ದೇಶ್ವರ್, ಎಸ್.ಎಸ್. ಸ್ಕೂಲ್.

9ನೇ ತರಗತಿ ವಿಭಾಗದಲ್ಲಿ ಲಯನ್ಸ್ ವಿದ್ಯಾ ಮಂದಿರ್ ಶಾಲೆಯ ಅಮಿತ್–ಪ್ರಥಮ, ಆಂಧ್ರ ಶಾಲೆಯ ವೈಷ್ಣವಿ–ದ್ವಿತೀಯ, ತೃತೀಯ ಬಹುಮಾನ ಅನನ್ಯ ನಾಗರಾಜ್, ಶಾರದ ರೆಸಿಡೆನ್ಸಿಯಲ್ ಸ್ಕೂಲ್, ಉಡುಪಿ.

10ನೇ ತರಗತಿ ವಿಭಾಗದಲ್ಲಿ ಆಂಧ್ರ ಶಾಲೆಯ ಕನಿಷ್ಕಾ–ಪ್ರಥಮ, ದೆಹಲಿ ಕನ್ನಡ ಶಾಲೆಯ ಎನ್. ನಿಸರ್ಗ–ದ್ವಿತೀಯ, ತೃತೀಯಾ ಬಹುಮಾನ–ಅಮಿತ್, ಆಂಧ್ರ ಎಜ್ಯುಕೇಷನ್ ಸೊಸೈಟಿ.

11ನೇ ತರಗತಿ ವಿಭಾಗದಲ್ಲಿ ದೆಹಲಿ ಕನ್ನಡ ಶಾಲೆಯ ಸೃಷ್ಟಿ ಕೊಲಿ–ಪ್ರಥಮ, ಲೇಡಿ ಇರ್ವಿನ್ ಶಾಲೆಯ ಅಂಕಿತಾ ಚೌಧರಿ–ದ್ವಿತೀಯ, ತೃತೀಯ ಬಹುಮಾನ ಸೌಮ್ಯ ಚೌಧರಿ ಲೇಡಿ ಇರ್ವಿನ್ ಸ್ಕೂಲ್.

12ನೇ ತರಗತಿ ವಿಭಾಗದಲ್ಲಿ ಲೇಡಿ ಇರ್ವಿನ್ ಶಾಲೆಯ ತಬ್ಸಂ–ಪ್ರಥಮ, ಏಕ್ತಾ ಜಿ ಸೋಲಾಪುರ್ಕರ್ ದ್ವಿತೀಯ, ತೃತೀಯ ಬಹುಮಾನ–ದೇಬಾಂಕಿತ ಬಾಗ್ ಲೇಡಿ ಇರ್ವಿನ್ ಸ್ಕೂಲ್, ಬಹುಮಾನ ಪಡೆದರು.

ತೀರ್ಪುಗಾರರ ವಿಶೇಷ ಬಹುಮಾನ ರೂಪಾಯಿ ಒಂದು ಸಾವಿರದಂತೆ ಇಪ್ಪತ್ತೈದು ಮಕ್ಕಳಿಗೆ ಹಾಗೂ ರೂಪಾಯಿ ಐದು ನೂರರಂತೆ ಇಪ್ಪತ್ತೊಂಬತ್ತು ಮಕ್ಕಳಿಗೆ ನೀಡಿ ಪ್ರೋತ್ಸಾಹಿಸಲಾಯಿತು. ಅ














# ರಾಣಿ ಅಬ್ಬಕ್ಕ ಚಿತ್ರ ಕಲಾ ಸ್ಪರ್ಧೆಯಲ್ಲಿ ಬಹುಮಾನ ವಿಜೇತ ಚಿತ್ರಗಳು






























# ಸವಿತಾ ಇನಾಮದಾರರ ‘ಜೀವನ ರೇಖೆ’ ಬೆಂಗಳೂರಿನ ಕಿರುಚಿತ್ರೋತ್ಸವದಲ್ಲಿ ಪ್ರದರ್ಶನ

“ಮಹಿಳೆ ಒಂದು ಹೆಜ್ಜೆ ಮುಂದಿಟ್ಟರೆ, ಸಮಾಜ ಒಂದು ಹಂತ ಮೇಲಕ್ಕೇರುತ್ತದೆ” ಎಂಬ ಆಶಯದೊಂದಿಗೆ ಅವಳ ಹೆಜ್ಜೆ ವೇದಿಕೆಯು ಮಹಿಳೆಯರು ನಿರ್ಮಿಸಿದ ಕಿರುಚಿತ್ರ ಪ್ರದರ್ಶನವನ್ನು ನವೆಂಬರ್ 3 ರಂದು ಬೆಂಗಳೂರಿನ ಗಾಂಧೀ ಭವನದಲ್ಲಿ ಆಯೋಜಿಸಿತ್ತು. ಬೆಳಗಿನ ಸೆಷನ್‌ನಲ್ಲಿ ಏಳು ಕಿರುಚಿತ್ರ ಪ್ರದರ್ಶನವಾಯಿತು. ವಿಭಿನ್ನ ಕತೆಯ ಎಳೆಯೊಂದಿಗೆ ಅತ್ಯಲ್ಪ ಸಮಯದಲ್ಲಿ ತಮ್ಮ ವಿಚಾರಗಳನ್ನು ಪ್ರೇಕ್ಷಕರಿಗೆ ಮುಟ್ಟಿಸಿ ಮೆಚ್ಚುಗೆ ಗಳಿಸಿತು. ಯುವ ಮಹಿಳೆಯರು ಅತ್ಯಂತ ಸಮರ್ಥವಾಗಿ ನಿರೂಪಿಸಿದರು. ನಮ್ಮ ದೆಹಲಿಯ ಬಹುಮುಖ ಪ್ರತಿಭೆಯ ಸವಿತಾ ಇನಾಂದಾರ್ ಅವರು ನಿರ್ದೇಶಿಸಿ ಅಭಿನಯಿಸಿದ ಕಿರುಚಿತ್ರ ‘ಜೀವನ ರೇಖೆ’ ನಿಜಕ್ಕೂ ಭರವಸೆ ಮೂಡಿಸಿತು. ಅವರ ಚೊಚ್ಚಲ ಪ್ರಯತ್ನ ಶ್ಲಾಘನೀಯ. ದಿನ ನಿತ್ಯ ನಮ್ಮ ನಿಮ್ಮೆಲ್ಲರ ನಡುವೆ ನಡೆಯುವ ಘಟನೆಯ ಮೂಲಕ ಸಮಾಜಕ್ಕೆ ಒಂದು ಸಂದೇಶ ನೀಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ದೆಹಲಿಯ ಹವ್ಯಾಸಿ ಕಲಾವಿದರು ಉತ್ತಮ ಗುಣಮಟ್ಟದ ಅಭಿನಯ ನೀಡಿದ್ದಾರೆ. ಹಿರಿಯ ಕಲಾವಿದೆ ಅಹಲ್ಯಾ ಚಿಂತಾಮಣಿ, ನೇತ್ರಾ, ಕುಮಾರ್, ಶ್ರೀನಾಥ್, ಪದ್ಮಿನಿ, ಮಾಲಿನಿ, ಸುರಭಿ ಇನಾಮದಾರ್ ಎಲ್ಲರೂ ಪ್ರಶಂಸಾರ್ಹರು. ಈ ಚಿತ್ರವನ್ನು ರಚಿಸಿ, ನಿರ್ಮಿಸಿ, ನಿರ್ದೇಶಿಸಿ, ಅಭಿನಯಿಸಿದ ಸವಿತಾ ಇನಾಂದಾರ್ ಅವರು ಇಟ್ಟ ಮೊದಲ ಹೆಜ್ಜೆ ಅವರ ಯಶಸ್ಸಿನ ಮೆಟ್ಟಿಲಾಗಲಿ. ಟಿ.ಎಸ್. ರಮೇಶ್ ಅವರ ಸಂಗೀತ ಚಿತ್ರದ ಅಂತ್ಯಕ್ಕೆ ಮತ್ತಷ್ಟು ಮೆರುಗು ನೀಡಿದೆ. ಅ

***ಉಷಾ ಭರತಾದ್ರಿ***

**ಜೀವನ ರೇಖೆ :** ಕಥೆಯಿಂದ ಪರದೆಯವರೆಗೆ ಮೂರು ದಶಕಗಳಿಂದ ದೆಹಲಿಯಲ್ಲಿ ವಾಸಿಸುತ್ತ ಕನ್ನಡಮ್ಮನ ಸೇವೆ ಸಲ್ಲಿಸುವ ಶ್ರೀಮತಿ ಸವಿತಾ ಇನಾಮದಾರರ ಚೊಚ್ಚಲ ಕನ್ನಡ ಕಿರು ಚಿತ್ರ ‘ಜೀವನ ರೇಖೆ’ ಬೆಂಗಳೂರಿನ ‘ಕನ್ನಡತಿ ಉತ್ಸವ 2018’ರ ಕಿರು ಚಿತ್ರೋತ್ಸವದಲ್ಲಿ ಆಯ್ಕೆಯಾಗಿ ನವೆಂಬರ್ 3 ರಂದು ಬೆಂಗಳೂರಿನ ಗಾಂಧೀ ಭವನದಲ್ಲಿ ತೆರೆಕಂಡು ಪ್ರೇಕ್ಷಕರ ಮನ ಗೆದ್ದಿತು. ಇದು ಕನ್ನಡ ಚಿತ್ರೋದ್ಯಮದತ್ತ ದೆಹಲಿ ಕನ್ನಡತಿಯ ಮೊದಲ ಹೆಜ್ಜೆ ಗುರುತು. ಈ ಕನ್ನಡತಿ ಉತ್ಸವವನ್ನು ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ‘ಅವಳ ಹೆಜ್ಜೆಯ’ ವಾರ್ಷಿಕೋತ್ಸವದ ಅಂಗವಾಗಿ ನಡೆಸಲಾಗಿತ್ತು. ಮಹಿಳೆಯರೇ ನಿರ್ದೇಶಿಸಿದಂತಹ ಒಟ್ಟು ಏಳು ಕಿರುಚಿತ್ರಗಳ ಪ್ರದರ್ಶನ ಹಾಗೂ ಸಂವಾದವನ್ನು ಚಿತ್ರ ನಿರ್ದೇಶಕಿ ಕವಿತಾ ಲಂಕೇಶ್ ಉದ್ಘಾಟಿಸಿದರು.

ಸವಿತಾ ಇನಾಮದಾರ ಅವರು ರಚಿಸಿ, ನಿರ್ದೇಶಿಸಿ, ನಟಿಸಿದ ಹಲವಾರು ಕನ್ನಡ, ಮರಾಠಿ, ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿನ ನಾಟಕಗಳು ಈಗಾಗಲೇ ದೆಹಲಿ, ಬೆಂಗಳೂರು, ಪುಣೆ ಮತ್ತು ಧಾರವಾಡದಲ್ಲಿ ಪ್ರದರ್ಶಿನಗೊಂಡಿವೆ. ಕಥೆ, ಕವನ, ಪ್ರಹಸನ ಹಾಗೂ ಆಹಾರದ ಬಗ್ಗೆ ಬರೆದ ಲೇಖನಗಳು ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಹನ್ನೆರಡು ನಿಮಿಷಗಳ ಅವಧಿಯಲ್ಲಿ ಇಡೀ ಕಥೆಯನ್ನು ರಸವತ್ತಾಗಿ ಚಿತ್ರಿಸಿ ಪ್ರದರ್ಸಿಸಲಾದ ಕಿರು ಚಿತ್ರ ಅವರ ನಿಜ ಜೀವನದಲ್ಲಾದ ಘಟನೆಯಿಂದ ಪ್ರೇರಿತವಾಗಿದೆ. ಕುಡಿತದ ಚಟ ಜೀವಕಂಟಕ ಅಂತ ಗೊತ್ತಿದ್ದರೂ ಅದನ್ನು ಬಿಡದೇ ಸಂಸಾರ ಹಾಳುಮಾಡಿದ ಕಥೆಗಳನ್ನ ಕೇಳಿದ್ದೇವೆ. ಆದರೆ ಸಂಬಂಧ ಸುಪ್ತ ಮನಸಿನ ಅವ್ಯಕ್ತ ಭಾವ, ಮನಸಿನ ಆಳವನ್ನು ಅಳೆಯುವ ಮಾಪನ ಇನ್ನೂ ಸೃಷ್ಟಿಯಾಗಿಲ್ಲ. ಆಗೋದೂ ಇಲ್ಲ. ಅದೆಷ್ಟೇ ತೊಂದರೆ ಕೊಟ್ಟರೂ ತನ್ನ ಪತಿಯನ್ನ ಸಾಯಲು ಬಿಡದೇ ಉಳಿಸಿಕೊಳ್ಳಲು ಪ್ರಯತ್ನಿಸಿದ ಮಹಿಳೆಯ ಕಥೆ ಹಾಗೂ ಅಕೆಯ ವ್ಯಥೆಯನ್ನು ಜೀವನ ರೇಖೆಯಲ್ಲಿ ನೋಡಬಹುದಾಗಿದೆ. ಮಹಿಳೆಯರು ತಮ್ಮ ಕಥೆಯನ್ನು ಧೈರ್ಯದಿಂದ ಹೇಳಿದಾಗ ಮಾತ್ರ ಜನರಿಗೆ ಅವರ ಬಗ್ಗೆ ತಿಳಿದುಬರುತ್ತದೆ, ಸಮಾಜದ ಪೂರ್ಣ ಚಿತ್ರಣ ಸಿಗುತ್ತೆ ಹಾಗೂ ನಿಜವಾದ ಸಮಾನತೆಯತ್ತ ಹೆಜ್ಜೆ ಹಾಕಲು ಸಹಾಯವಾಗುತ್ತದೆ.

ಈ ಕಿರು ಚಿತ್ರದಲ್ಲಿ ದೆಹಲಿ ಕರ್ನಾಟಕ ಸಂಘದ ಹವ್ಯಾಸಿ ರಂಗಭೂಮಿಯ ಕಲಾವಿದರಾದಂತಹ ಡಾ. ಅಹಲ್ಯಾ ಚಿಂತಾಮಣಿ, ಶಿವ ಕುಮಾರ, ನೇತ್ರಾವತಿ ಶಿವ ಕುಮಾರ್, ಶ್ರೀನಾಥ್ ಅಯ್ಯಂಗಾರ್, ಪದ್ಮಿನಿ ಶ್ರೀನಾಥ್, ಮಾಲಿನಿ ಪ್ರಹ್ಲಾದ್, ಸುರಭಿ ಇನಾಮದಾರ್ ಮತ್ತು ಸವಿತಾ ಇನಾಮದಾರ್ ಭಾಗವಹಿಸಿದ್ದಾರೆ. ರಾಜ್ಯೋತ್ಸವದ ಅಂಗವಾಗಿ ನಡೆಸಲಾಗುತ್ತಿದ್ದ ಕನ್ನಡತಿ ಉತ್ಸವದ ಕಿರು ಚಿತ್ರಗಳನ್ನು ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಕರ್ನಾಟಕದ ವಿವಿಧ ನಗರಗಳಲ್ಲಿ ಪ್ರದರ್ಶಿಸಲಾಗುವುದು. ಅ

***ಸವಿತಾ ಇನಾಮದಾರ್***

ಯೂಟ್ಯೂಬ್‌ನಲ್ಲಿ ಲಭ್ಯವಿರುವ ಈ ಚಿತ್ರದ ಲಿಂಕ್ ಕೊಡಲಾಗಿದೆ.
**https://www.youtube.com/watch?v=UKANC-Fyl28&t=89s**



## ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಿಂದ ರಾಜ್ಯೋತ್ಸವ


ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಇದೇ ನವೆಂಬರ್ 20ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಿತು. ಸದಸ್ಯೆಯರು ಉತ್ಸಾಹದಿಂದ ನಾಡಗೀತೆಗಳನ್ನು ಹಾಡಿದರು. ಇದೇ ಸಂದರ್ಭದಲ್ಲಿ ಕರ್ನಾಠಕದ ವಿವಿಧ ಜಿಲ್ಲೆಗಳಲ್ಲಿ ಮಾಡುವ ವಿವಿಧ ಉಪ್ಪಿಟ್ಟಿನ ಸ್ಪರ್ಧೆ ಮತ್ತು ವಿವಧ ಜಿಲ್ಲೆಗಳ ಸೀರೆ ಮತ್ತು ಆಭರಣಗಳ ಪ್ರದರ್ಶನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಅ

***ಲೀಲಾವತಿ ಗುರುಪ್ರಸಾದ್***

# ಅಗಲಿದ ಮಾಜಿ ಸಚಿವರು – ಸಂಘದಿಂದ ಶ್ರದ್ಧಾಂಜಲಿ



ಮಾಜಿ ಕೇಂದ್ರ ಸಚಿವ, ಕನ್ನಡ ಚಿತ್ರರಂಗದಲ್ಲಿ ರೆಬೆಲ್ ಸ್ಟಾರ್ ಎಂದು ಗುರುತಿಸಲಾಗಿದ್ದ ನಟ ಅಂಬರೀಷ್ ಅವರು ಇದೇ ನವಂಬರ್ 24ರಂದು ನಿಧನರಾದರು. ಅಂಬರೀಷ್ ಅವರು ಮೂರು ಬಾರಿ ಸಂಸದರಾಗಿ ಆಯ್ಕೆಯಾಗಿದ್ದು ಕೆಲ ಸಮಯ ಕೇಂದ್ರ ಸರಕಾರದಲ್ಲಿ ವಾರ್ತಾ ಮತ್ತು ಪ್ರಚಾರ ಖಾತೆಯ ರಾಜ್ಯ ಮಂತ್ರಿಯಾಗಿದ್ದರು. ಅವರು 2013ರಲ್ಲಿ ಮಂಡ್ಯ ಕ್ಷೇತ್ರದಿಂದ ಶಾಸಕರಾಗಿ ವಿಧಾನ ಸಭೆಗೆ ಆಯ್ಕೆಯಾಗಿ ರಾಜ್ಯದ ವಸತಿ ಸಚಿವರೂ ಆಗಿದ್ದರು. ಅವರು 1973ರಲ್ಲಿ ನಾಗರಹಾವು ಚಿತ್ರದಲ್ಲಿ ಜಲೀಲನ ಪಾತ್ರದಿಂದ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿ ಸುಮಾರು ಇನ್ನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.



ಮಾಜಿ ರೈಲ್ವೆ ಸಚಿವ ಸಿ.ಕೆ. ಜಾಫರ್ ಶರೀಫ್ ಅವರು ಇದೇ ನವಂಬರ್ 25ರಂದು ನಿಧನರಾದರು. ಸಾಮಾನ್ಯ ಕುಟುಂಬದಲ್ಲಿ ಜನಿಸಿದ್ದ ಶರೀಫ್ ಅವರು ಕೇಂದ್ರ ಸರಕಾರದಲ್ಲಿ ರೈಲ್ವೇ ಸಚಿವರಾಗಿ ದೇಶದ ರೈಲ್ವೇ ಇಲಾಖೆಯಲ್ಲಿ ಹಲವಾರು ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಅವರು ಎಂಟು ಬಾರಿ ಸಂಸದರಾಗಿ ಆಯ್ಕೆಯಾಗಿ ಕರ್ನಾಟಕದ ಹಲವಾರು ಯೋಜನೆಗಳಿಗೆ ಕೇಂದ್ರದ ನೆರವನ್ನು ನೀಡುವಲ್ಲಿ ಶ್ರಮಿಸಿದ್ದಾರೆ. ರೈಲ್ವೇಯನ್ನು ಮೀಟರ್ ಗೇಜ್‌ನಿಂದ ಬ್ರಾಡ್‌ಗೇಜ್‌ಗೆ ಪರಿವರ್ತಿಸುವಲ್ಲಿ ಅವರ ಮುನ್ನೋಟವೇ ಕಾರಣವಾಗಿದೆ.

**ಅಗಲಿದ ಅಂಬರೀಷ್ ಹಾಗೂ ಜಾಫರ್ ಶರೀಫ್ ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ ಇದೇ ನವಂಬರ್ 25ರಂದು ಶ್ರದ್ಧಾಂಜಲಿ ಅರ್ಪಿಸಲಾಯಿತು**


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS

A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Dec -2018, Vol. No.29, Issue No.3, Price Rs.1/-
RNI Regn. No. 53405/91, DL-SW-1/4016/16-18
Date of Publication : Dec 8th / 9th, Posting Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

EMPOWERING YOUR ENTREPRENEURIAL DREAMS



**KBL MSME**
**— SCHEME —**
**FINANCE FOR MICRO, SMALL & MEDIUM ENTERPRISES**

**Timely finance for Micro, Small and Medium Enterprises that help their business grow.**

**Finance of upto ₹500 lakhs is given for**
- Working Capital requirements
- Establishment and / or improvement of the unit, repairs & renovations, acquiring machineries/vehicles/equipments/ any fixed assets for the unit
- Purchase/acquiring of property (shop/factory/ godown/office) for self use.

*Conditions apply

**For more information and to apply online, visit www.karnatakabank.com or step into our nearest branch for details.** Follow us on / karnatakabank

**Words of precaution to the public**

Governor, RBI or Bank or any such other organisation does not send mails or SMSs asking you to deposit money to transfer a larger sum of money to your account. Do not be a victim of such frauds.

Karnataka Bank
Your Family Bank. Across India.

Regd. & Head Office: Mangaluru- 575 002 CIN: L 85110KA1924PLC001128 E-mail: info@ktkbank.com visit us at: www.karnatakabank.com